ಹುಬ್ಬಳ್ಳಿ–ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ, ಕೊಪ್ಪಳ, ವಿಜಯನಗರ, ಬೆಳಗಾವಿ, ದಾವಣಗೆರೆ, ರಾಯಚೂರ, ಯಾದಗಿರಿ

ಪಬ್ಲಿಕ್ ಫಾಸ್ಟ್ ೩೧

PUBLIC FAST

ಕನ್ನಡ ದಿನಪತ್ರಿಕೆ

E-mail : publicfast31@gmail.com

ಧ್ವನಿ ನಿಮ್ಮದು ಸಹಾಯ ನಮ್ಮದು... DAILY NEWS PAPER

ಸಂಪಾದಕರು : ಐಶ್ವರ್ಯ ಪಿ. ಉಪ ಸಂಪಾದಕರು : ಇಮ್ರಾನ್ ಹೆಬ್ಬಳ್ಳಿ

● ಸಂಪುಟ : 01 ● ಸಂಚಿಕೆ : 128 ● ದಿನಾಂಕ : 28–09–2026 ಸೋಮವಾರ KNKAN/26/A2600 ಪುಟ : 4 ಬೆಲೆ : ರೂ. 2 Mobile : 9916890865

ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ: ಮನ್ ಕಿ ಬಾತ್‌ನಲ್ಲಿ ದೇಶಕ್ಕೆ ಮೋದಿ ಸಂದೇಶ



ನವದೆಹಲಿ : ಭಯೋತ್ಪಾದಕರ ನೆಲೆಗಳ ಮೇಲೆ ಭಾರತೀಯ ಸೇನೆ ನಡೆಸಿದ ಸರ್ಜಿಕಲ್ ಸ್ಟ್ರೈಕ್ ಮೂಲಕ ಭಾರತ ತನ್ನ ಭಯೋತ್ಪಾದನೆ ವಿರೋಧಿ ನೀತಿಯ ಹೊಸ ಮಾದರಿಯನ್ನುಜಗತ್ತಿಗೆತೋರಿಸಿದೆಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆಕಾಶವಾಣಿಯಲ್ಲಿ ಪ್ರಸಾರವಾದ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೆ.28ರಂದು ಸರ್ಜಿಕಲ್ ಸ್ಟ್ರೈಕ್‌ಗೆ ಹತ್ತು ವರ್ಷ ಪೂರ್ಣಗೊಳ್ಳಲಿದೆ. ನಿಯಂತ್ರಣ ರೇಖೆ ದಾಟಿ ಭಯೋತ್ಪಾದಕರ ವಿರುದ್ಧ ಭಾರತೀಯ ಯೋಧರು ನಡೆಸಿದ ಕಾರ್ಯಾಚರಣೆಯನ್ನು ಇಡೀ ಜಗತ್ತು ಅಚ್ಚರಿಯಿಂದ ಗಮನಿಸಿತ್ತು ಎಂದರು.

ದೇಶವುಹಲವುವರ್ಷಗಳಿಂದಎದುರಿಸುತ್ತಿದ್ದ ಭಯೋತ್ಪಾದಕ ದಾಳಿಗಳಿಗೆ ಸರ್ಜಿಕಲ್ ಸ್ಟ್ರೈಕ್ ನಿರ್ಣಾಯಕ ಉತ್ತರವಾಗಿತ್ತು. ಬಾಲಾಕೋಟ್ ವಾಯುದಾಳಿ ಸೇರಿದಂತೆ ಆಪರೇಷನ್ ಸಿಂಧೂರ್ ವರೆಗೆ ಭಾರತ ಹಲವು ಬಾರಿ ಭಯೋತ್ಪಾದಕ ದಾಳಿಗಳಿಗೆ ಸೂಕ್ತ ಪ್ರತಿಕ್ರಿಯೆ ನೀಡುವುದಾಗಿ ಸಂದೇಶ ಸಾರಿದೆ ಎಂದು ಮೋದಿ ಹೇಳಿದರು.

ಒಂದು ಕಾಲದಲ್ಲಿ ದೇಶದಲ್ಲಿ ಸರಣಿ ಸ್ಫೋಟಗಳು ಸಾಮಾನ್ಯವಾಗಿದ್ದವು. 2008ರ ಸೆ.13ರಂದು ದೆಹಲಿಯಲ್ಲಿ ನಡೆದ ಸರಣಿ ಸ್ಫೋಟಗಳಲ್ಲಿ ಅನೇಕರು ಮೃತಪಟ್ಟರು. ಕೆಲವೇ ವಾರಗಳ ಬಳಿಕ ಮುಂಬೈನಲ್ಲಿ 26/11 ಭಯೋತ್ಪಾದಕ ದಾಳಿ ನಡೆಯಿತು. ಆದರೆ ಇಂದು ಭಾರತ ಭಯೋತ್ಪಾದನೆ ವಿರುದ್ಧ ಶೂನ್ಯ ಸಹನೆ ನೀತಿಯನ್ನು ಅನುಸರಿಸುತ್ತಿದ್ದು, ಅದರ ಪರಿಣಾಮಗಳನ್ನುದೇಶ ಕಾಣುತ್ತಿದೆ ಎಂದು ಹೇಳಿದರು.

ಈ ವರ್ಷ ಸೆಪ್ಟೆಂಬರ್ 11ರ ಭಯೋತ್ಪಾದಕ ದಾಳಿಗೂ 25 ವರ್ಷ ಪೂರ್ಣಗೊಂಡಿದೆ. ಅಮೆರಿಕದ ವಿಶ್ವವಾಣಿಜ್ಯಕೇಂದ್ರದ ಮೇಲಿನ ದಾಳಿಯಲ್ಲಿ ಅಮೆರಿಕನ್ನರ ನಂತರ ಅತಿ ಹೆಚ್ಚು ಬಲಿಯಾದವರು ಭಾರತೀಯರು ಎಂದು ಮೋದಿ ಸರಿಸಿದರು. 2014ರಲ್ಲಿ ಪ್ರಧಾನಿಯಾದ ಬಳಿಕ ಅಮೆರಿಕ ಪ್ರವಾಸದ ವೇಳೆ ಈ ದಾಳಿಯಲ್ಲಿ ಮೃತಪಟ್ಟವರಿಗೆ ಗೌರವ ಸಲ್ಲಿಸಿದ್ದಾಗಿ ತಿಳಿಸಿದರು.

ಜನಗಣತಿ ಕಾರ್ಯ ಪ್ರಗತಿ:

ದೇಶದಲ್ಲಿ ನಡೆಯುತ್ತಿರುವ ಜನಗಣತಿಯ ಮೊದಲ ಹಂತ ಬಹುತೇಕ ಪೂರ್ಣಗೊಂಡಿದ್ದು, ಇದುವರೆಗೆ 32 ಕೋಟಿಗೂ ಹೆಚ್ಚು ಕುಟುಂಬಗಳ ಮಾಹಿತಿಯನ್ನು ದಾಖಲಿಸಲಾಗಿದೆ ಎಂದು ಪ್ರಧಾನಿ ತಿಳಿಸಿದರು.ಲಡಾಖ್, ಹಿಮಾಚಲ ಪ್ರದೇಶ, ಜಮ್ಮು–ಕಾಶ್ಮೀರ ಮತ್ತು ಉತ್ತರಾಖಂಡದ ಹಿಮಾವೃತ ಹಾಗೂ ದೂರದ ಪ್ರದೇಶಗಳಲ್ಲಿಯೂ ಕಾರ್ಯ ಮುಂದುವರಿದಿದೆ.ಜನಗಣತಿಪ್ರತಿಯೊಬ್ಬರ ರಾಷ್ಟ್ರೀಯ ಜವಾಬ್ದಾರಿಯಾಗಿದೆ. ಮೊಬೈಲ್ ಮೂಲಕ ಸ್ವಯಂ ನೋಂದಣಿ ಮಾಡಿಕೊಳ್ಳುವ ಸೌಲಭ್ಯವಿದ್ದು, ಹಿಂದಿ ಸೇರಿದಂತೆ 16 ಭಾಷೆಗಳಲ್ಲಿ ಈ ವ್ಯವಸ್ಥೆ ಲಭ್ಯವಿದೆ. ಜನರು ಜನಗಣತಿ ಜಾಲತಾಣಕ್ಕೆ ತೆರಳಿ ಮೊಬೈಲ್ ಸಂಖ್ಯೆ ಬಳಸಿ ತಮ ಸ್ಥಳ ಹಾಗೂ ಕುಟುಂಬದ ವಿವರಗಳನ್ನು ದಾಖಲಿಸಿ ಸಲ್ಲಿಸಬಹುದು ಎಂದು ಹೇಳಿದರು.

ಈ ಪ್ರಕ್ರಿಯೆಗೆ ಸುಮಾರು 15ರಿಂದ 20 ನಿಮಿಷ ಮಾತ್ರ ಬೇಕಾಗುತ್ತದೆ. ಯಾವುದೇ ದಾಖಲೆಗಳನ್ನು ಅಪ್ಲೋಡ್ ಮಾಡುವ ಅಗತ್ಯವಿಲ್ಲ. ಮಾಹಿತಿ ಸಲ್ಲಿಸಿದ ಬಳಿಕ ವಿಶೇಷ ಗುರುತಿನ ಸಂಖ್ಯೆ ದೊರೆಯಲಿದ್ದು, ಜನಗಣತಿ ಸಿಬ್ಬಂದಿ ಮನೆಗೆ ಭೇಟಿ ನೀಡಿದಾಗ ಅದನ್ನು ನೀಡಬಹುದು. ಪರಿಶೀಲನೆಯ ಬಳಿಕ ಮಾಹಿತಿ ಜನಗಣತಿ ದಾಖಲೆಗಳ ಭಾಗವಾಗಲಿದೆ ಎಂದು ಮೋದಿ ವಿವರಿಸಿದರು. ಇದುವರೆಗೆ 2 ಕೋಟಿ 60 ಲಕ್ಷಕ್ಕೂಹೆಚ್ಚುಮಂದಿ ಮೊಬೈಲ್ ಮೂಲಕ ಜನಗಣತಿ ಜಾಲತಾಣದಲ್ಲಿ ತಮ್ಮ ವಿವರಗಳನ್ನು ದಾಖಲಿಸಿದ್ದಾರೆ ಎಂದು ಅವರು ತಿಳಿಸಿದರು. ವಿಶ್ವ ಹಿಂದೂ ಪರಿಷತ್ನ ಮಾಜಿ ಅಂತಾರಾಷ್ಟ್ರೀಯ ಕಾರ್ಯಾಧ್ಯಕ್ಷ ಅಶೋಕ್ ಸಿಂಘಾಲ್ ಅವರ 100ನೇ ಜನ ವರ್ಷಾಚರಣೆಯನ್ನು ಪ್ರಧಾನಿ ಸರಿಸಿದರು. ಅಕ್ಟೋಬರ್ 2ರಂದು ಮಹಾತ ಗಾಂಧೀಜಿಯವರ ಜನದಿನ ಆಚರಿಸಲಾಗುತ್ತಿದ್ದು, ಸ್ವಚ್ಛತೆ ಬಾಪೂ ಅವರ ಜೀವನದ ಪ್ರಮುಖ ಸಂದೇಶಗಳಲ್ಲಿ ಒಂದಾಗಿದೆ. ಒಬ್ಬ ವ್ಯಕ್ತಿಯಿಂದ ಆರಂಭವಾಗುವ ಪ್ರಯತ್ನಕ್ಕೆ ಇತರರು ಕೈಜೋಡಿಸಿದಾಗ ಅದು ಜನಭಾಗೀದಾರಿ ಚಳವಳಿಯಾಗುತ್ತದೆ. ಸ್ವಚ್ಛತೆಯೇ ಮಹಾತ ಗಾಂಧೀಜಿಗೆದೇಶನೀಡಬಹುದಾದಅತ್ಯಂತ ಸುಂದರ ಗೌರವ ಎಂದು ಹೇಳಿದರು.

ಮಾದಕವಸ್ತುಮುಕ್ತಯುವಅಭಿಯಾನದಡಿ ದೇಶದ ಕೋಟ್ಯಂತರ ಯುವಕರು ಮಾದಕ ವಸ್ತುಗಳಿಂದ ದೂರವಿರುವ ಸಂಕಲ್ಪ ಮಾಡಿದ್ದಾರೆ. 100 ವಾರಗಳ ಕಾಲ ನಡೆಯಲಿರುವ ಈ ಅಭಿಯಾನದಲ್ಲಿ ಮೈ ಭಾರತ್ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಯುವಕರು ಭಾಗವಹಿಸು ತ್ತಿದ್ದಾರೆ. ಗ್ರಾಮಗಳು ಮತ್ತು ಪಟ್ಟಣಗಳಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸುವಅಗತ್ಯವಿದೆಎಂದುಪ್ರಧಾನಿಹೇಳಿದರು. ಸೆಪ್ಟೆಂಬರ್‌ತಿಂಗಳನ್ನುಅಪೌಷ್ಟಿಕತೆವಿರುದ್ಧದ ಹೋರಾಟಕ್ಕೆ ಮೀಸಲಿಡಲಾಗಿದೆ ಎಂದು ಪ್ರಧಾನಿ ಹೇಳಿದರು. ಪೋಷಣ್ ಮಾಸದ ಅಂಗವಾಗಿ ವಿವಿಧ ರಾಜ್ಯಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಥಾಯ್ಲೆಂಡ್‌ನಲ್ಲೂ ಗಣೇಶ ಭಕ್ತಿ: ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಗಣೇಶನ ಮೇಲಿನ ಭಕ್ತಿ ಹೆಚ್ಚುತ್ತಿದೆ ಎಂದು ಪ್ರಧಾನಿ ಹೇಳಿದರು. ಥಾಯ್ಲೆಂಡ್‌ನ ಪಂಥೌನ್ ಥಿರ್ಖಾನೋನ್ ಅವರು ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಗಣೇಶನಿಗೆ ಸಂಬಂಧಿಸಿದ ಪರಂಪರೆಗಳ ಅಧ್ಯಯನ ನಡೆಸಿದ್ದಾರೆ ಎಂದು ತಿಳಿಸಿದರು. 2002ರಲ್ಲಿಉತ್ತರಥಾಯ್ಲೆಂಡ್‌ನಚಿಯಾಂಗ್ ಮಾಯ್‌ನಲ್ಲಿ ಗಣೇಶ ಹಿಮಾಲಯ ವಸ್ತುಸಂಗ್ರಹಾಲಯ ಸ್ಥಾಪಿಸಿದ ಅವರು, ಭಾರತ ಮತ್ತು ನೇಪಾಳ ಸೇರಿದಂತೆ ಹಲವು ಏಷ್ಯಾ ರಾಷ್ಟ್ರಗಳಿಗೆ ಭೇಟಿ ನೀಡಿದ್ದಾರೆ. ವಸ್ತುಸಂಗ್ರಹಾಲಯದಲ್ಲಿ ಗಣೇಶನ 10 ಸಾವಿರಕ್ಕೂ ಹೆಚ್ಚು ವಿಗ್ರಹಗಳಿದ್ದು, ಭಾರತ–ಕ್ಕೆ ಬರಲು ಸಾಧ್ಯವಾಗದ ಭಕ್ತರಿಗಾಗಿ ಅಷ್ಟವಿನಾಯಕ ವಿಗ್ರಹಗಳೂ ಇವೆ. ಪ್ರತೀ ಭಾನುವಾರ ಬೆಳಗ್ಗೆ ಗಣೇಶನ ಪೂಜೆ ನಡೆ–ಯುತ್ತದೆ ಎಂದು ಮೋದಿ ಹೇಳಿದರು. ಭಾರತದ ನಂಬಿಕೆ, ಕಲೆ ಮತ್ತು ಸಾಂಸ್ಕೃತಿಕ ಪರಂಪರೆ ಇತರ ದೇಶಗಳಲ್ಲಿಯೂ ಜನಪ್ರಿಯವಾಗುತ್ತಿರುವುದಕ್ಕೆ ಇದು ಉದಾಹರಣೆಯಾಗಿದೆ ಎಂದು ಅವರು ಹೇಳಿದರು.

ಬಿಡದಿ ಟೌನ್ ಶಿಪ್‌ಗಾಗಿ ಬಲವಂತದಿಂದ ಜಮೀನು ಪಡೆಯುವುದಿಲ್ಲ

ಬೆಂಗಳೂರು : ಬಿಡದಿ ಟೌನ್ ಶಿಪ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ರೈತರಿಂದ ಬಲವಂತವಾಗಿ ಜಮೀನು ಪಡೆಯುವ ಪ್ರಶ್ನೆಯೇ ಇಲ್ಲ ರೈತರು ರಸ್ತೆ ತಡೆ ಚಳುವಳಿ ನಡೆಸುವುದು ಬೇಡ ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಯಾರು ಜಮೀನು ಕೊಡಬೇಡಿ ಎಂದು ಹೇಳುತ್ತಿದ್ದೇನೆ.ಇಷ್ಟ ಇದ್ದವರೇ ಕೊಡುತ್ತಾರೆ,ಇಲ್ಲದಿದ್ದರೆ ಇರಲಿ.ಬದುಕಬೇಕು,ದುಡ್ಡು ಬೇಕು ಎಂದವರು ಕೊಡುತ್ತಾರೆ, ಬೇಡವಾದವರು ಬಿಡುತ್ತಾರೆ. ನನಗೆ ಪ್ರತಿಷ್ಠೆ ಇಲ್ಲ.ಕುಮಾರಸ್ವಾಮಿ ಯೋಜನೆಯನ್ನು ಮುಂದುವರೆಸುತ್ತಿದ್ದೇನೆ ಅಷ್ಟೇ ಎಂದು ಅವರು ಸ್ಪಷ್ಟಪಡಿಸಿದರು.

ವಿಟಿಯು ಅನುದಾನ :

ವಿಟಿಯುಗೆ ಅನುದಾನ ಕೊಡಲು ಪತ್ರ ಬರೆದಿರುವ ವಿಚಾರವನ್ನು ಪರಿಶೀಲಿಸುತ್ತಿದ್ದೇನೆ ಎಂದು ಸಿಎಂ ತಿಳಿಸಿದ್ದಾರೆ.

ವಿಪಕ್ಷಗಳು ಚುನಾವಣಾ ಆಯೋಗದ ವಿರುದ್ಧ ರಾಜಕೀಯ ಪ್ರೇರಿತ ಹೋರಾಟ ಎಂದು ಟೀಕಿಸಿರುವ ಕುರಿತು ಸಿಎಂ ಪ್ರತಿಕ್ರಿಯಿಸಿ,ನಾವು ಏನು ಹೇಳಿದ್ದೇವೋ ಅದನ್ನೇ ಚುನಾವಣಾ ಆಯೋಗದವರೇ ಹೇಳಿದ್ದಾರೆ.ನೀವು ಮಾಡುತ್ತಿರುವುದು ಸರಿಯಲ್ಲ ಎಂದು ಇಬ್ಬರು ಚುನಾವಣಾ ಆಯೋಗದ ಸದಸ್ಯರು ಹೇಳಿದ್ದಾರೆ.ಪ್ರಜಾಪ್ರಭುತ್ವ ಅಂದರೆ ಬಹುಮತ. ಇಬ್ಬರೂ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಥ್ಯಾಪೆಹಾಕಿ ಹೆದರಿಸಿ ಕುಳ್ಳಿರಿಸಿದ್ದಾರೆ ಎಂದು ದೂರಿದರು.

ಎಇಇ ಕಾಣೆಯಾಗಿರುವ ಪ್ರಕರಣ :

ಎಇಇ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು ಈ ಹಿಂದೆಯೂ ಅವನು ಇದೇ ರೀತಿ ಹೋಗಿದ್ದ, ಕೊನೆಯ ಬಾರಿ ಅಜ್ಮೀರಿನಿಂದ ಪೊಲೀಸರು ಕ–ರೆದುಕೊಂಡು ಬಂದಿದ್ದರು. ಕೆಲಸದ ವೀಡಿಯೋ ಮಾಡಬೇಕು ಎಂಬ ಕಾನೂನಿಗೆ ಅವನು ಸಹಕಾರ ನೀಡಿರಲಿಲ್ಲ.ಆಫೀಸರ್ ಗಳು ಕೇಳುತ್ತಿದ್ದಾರೆ. ನಾಯಕ್



ಎಂಬುವವರು ಗದಗನಲ್ಲಿ ಎರಡು ಮೂರು ಬಾರಿ ದೂರುನೀಡಿದ್ದಾರೆ.ಸೈಟ್ಗಳನ್ನುಭೇಟಿಮಾಡುತ್ತಿರಲಿಲ್ಲ. ಸಾಧ್ಯವಾದಷ್ಟು ಬೇಗ ಅವನನ್ನು ಪತ್ತೆ ಮಾಡುತ್ತೇವೆ ಎಂದು ಹೇಳಿದರು.

ದೆಹಲಿ ಪ್ರವಾಸ ಮತ್ತು ಸಿಡಬ್ಲ್ಯುಸಿ ಸಭೆ :

ನಾಳೆ ದೆಹಲಿಗೆ ತೆರಳುತ್ತಿರುವ ಕುರಿತು ಮಾತನಾಡಿದ ಅವರು,ವೋಟ್ ಚೋರಿ ವಿಚಾರವಾಗಿ ಸಿಡಬ್ಲ್ಯುಸಿ ಸಭೆ ಕರೆಯಲಾಗಿದೆ. ಅದರಲ್ಲಿ ನಮ್ಮ ರೂಪರೇಖೆ ಏನು ಎಂಬುದರ ಬಗ್ಗೆ ಚರ್ಚಿಸಲಾಗುವುದು. ಈಗಾಗಲೇ ನಮ್ಮನಾಯಕ ರಾಹುಲ್ ಗಾಂಧಿ ವೋಟ್ ಚೋರಿ ಬಗ್ಗೆ ಹೇಳಿದ್ದಾರೆ.

ಅವೆಲ್ಲವೂ ಸತ್ಯ. ಯಾವ ರೀತಿಯಲ್ಲಿ ಮತಗಳ್ಳತನವಾಗಿದೆ, ಚುನಾವಣೆಯಲ್ಲಿ ಅಕ್ರಮ ನಡೆದ ಬಗ್ಗೆ ಚರ್ಚಿಸಲಾಗುವುದು. ತದನಂತರ ಸರ್ವಪಕ್ಷ ಸಭೆ ಕೂಡ ಇದೆ. ವಿರೋಧ ಪಕ್ಷಗಳನ್ನು ದೆಹಲಿಗೆ ಕರೆದಿದ್ದೇವೆ. ಸರ್ವಪಕ್ಷ ನಿಯೋಗ ಕೇಂದ್ರ ಸರ್ಕಾರವನ್ನು ಭೇಟಿ ಮಾಡಲಿದೆ" ಎಂದು ತಿಳಿಸಿದ್ದಾರೆ.

ನಿಗಮ ಮಂಡಳಿ ಅಧ್ಯಕ್ಷರ ಆಯ್ಕೆ :

ನಿಗಮ ಮಂಡಳಿ ಅಧ್ಯಕ್ಷರ ಆಯ್ಕೆ ಬಗ್ಗೆ ಚರ್ಚೆಯಾಗಿದೆ.ಹಿರಿಯ ಶಾಸಕರು ಮತ್ತು ಹಿರಿಯ ಕಾರ್ಯಕರ್ತರಿಗೆ ಸ್ಥಾನ ನೀಡಬೇಕಿದೆ. ಎಲ್ಲವೂ ದೆಹಲಿಗೆ ಹೋದಾಗ ಚರ್ಚೆಯಾಗುತ್ತದೆ.

ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಿಸಲು ಸೂಚನೆ

ಧಾರವಾಡ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಅಕ್ಟೋಬರ 2 ರಂದು ಬೆಳಿಗ್ಗೆ 9 ಗಂಟೆಗೆ 157 ನೇ ಗಾಂಧಿ ಜಯಂತಿಯನ್ನು ಧಾರವಾಡ ಹೊಸ ಬಸ್ ನಿಲ್ದಾಣ ಹತ್ತಿರದ ಗಾಂಧಿ ಭವನದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಕ್ರಮವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ. ಡಿ. ಅವರು ಹೇಳಿದರು.



ಅವರು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಭವನದಲ್ಲಿ ಜರುಗಿದ ಮಹಾತ್ಮ ಗಾಂಧೀಜಿಯವರ 157 ನೇ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಗಾಂಧೀಜಿ ಜಯಂತಿ ಕಾರ್ಯಕ್ರಮವನ್ನು ನೂತನ ಗಾಂಧಿ ಭವನದಲ್ಲಿ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಮಹಾನಗರ ಪಾಲಿಕೆ ಅಧಿಕಾರಿಗಳು ಗಾಂಧಿ ಭವನ ಹಾಗೂ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿರುವ ಗಾಂಧಿ ಪ್ರತಿಮೆ ಹಾಗೂ ಸುತ್ತಲಿನ ಪ್ರದೇಶದ ಸ್ವಚ್ಛತೆ ಕೈಗೊಳ್ಳಬೇಕು. ಗಾಂಧಿ ಜಯಂತಿಯಂದು ಗಾಂಧಿ ಭವನವನ್ನುಅಲಂಕರಿಸಿ,ಆಕರ್ಷಣೀಯವಾಗಿ ಸಿದ್ಧಗೊಳಿಸಬೇಕೆಂದು ಪಾಲಿಕೆಯ ಅಧಿಕಾರಿಗಳಿಗೆ ಅವರು ಸೂಚಿಸಿದರು.

ರಜಾ ದಿನವಾಗಿರುವದರಿಂದ ಸಾರ್ವಜನಿಕರು, ವಿದ್ಯಾರ್ಥಿಗಳು, ಗಾಂಧಿ ವಿಚಾರ ಪ್ರಣಿತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮತ್ತು ಜಿಲ್ಲೆಯ ಜನಪ್ರತಿನಿಧಿಗಳು, ಅಧಿಕಾರಿಗಳು ಕ್ರಮವಹಿಸಬೇಕೆಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಗಾಂಧಿ ಪ್ರೀಯ ಭಜನೆಗಳು, ಸರ್ಮಧರ್ಮ ಪ್ರಾರ್ಥನೆ, ವಿಶೇಷ ಉಪನ್ಯಾಸವನ್ನು ಆಯೋಜಿಸಬೇಕು. ಈಗಾಗಲೇ ವಾರ್ತಾ ಇಲಾಖೆಯಿಂದ ಜಿಲ್ಲಾಮಟ್ಟದಲ್ಲಿ ಆಯೋಜಿಸಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಪ್ರೌಢಶಾಲಾ ವಿಭಾಗ, ಪಿಯು ಕಾಲೇಜು ವಿಭಾಗ ಮತ್ತು ಪದವಿ ಹಾಗೂ ಸ್ನಾತಕೊತ್ತರ ವಿಭಾಗದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆಗೆ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಅವರು ತಿಳಿಸಿದರು.

ಗಾಂಧಿಭವನದಲ್ಲಿಮಹಾತ್ಮಗಾಂಧೀಜಿಯವರ ವಿಚಾರಧಾರೆಗಳನ್ನು, ತತ್ವ ಸಿದ್ದಾಂತಗಳನ್ನು ಮತ್ತು ಅವರ ಜೀವನ ಚರಿತ್ರೆಯನ್ನು ಪ್ರತಿಬಿಂಬಿಸುವ ಹಾಗೂ ಮಾರ್ಗದರ್ಶನ ಮಾಡುವ ಕಾರ್ಯಕ್ರಮಗಳನ್ನು ಗಾಂಧೀಜಿ ಪ್ರಣಿತ ಸಂಘ–ಸಂಸ್ಥೆಗಳ, ಶಾಲಾ ಕಾಲೇಜುಗಳ ಸಹಯೋಗದಲ್ಲಿ ಆಯೋಜಿಸಲು ಸೂಚಿಸಲಾಗಿದೆ ಎಂದು ಅವರು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕರಾದ ನಸೀರಾಬಿ ಶೇಖ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಭೆಯಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ಸಂಜೀವ ಕುಲಕರ್ಣಿ, ಧಾರವಾಡ ತಹಶೀಲ್ದಾರ (ಪ್ರ) ಡಾ. ಡಿ.ಎಚ್. ಹೂಗಾರ, ಮಹಾನಗರ ಪಾಲಿಕೆಯ ವಲಯ ಸಹಾಯಕ ಆಯುಕ್ತ ಅರವಿಂದ ಜಮಖಂಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಜಿ.ಪಂ ಅಧಿಕಾರಿ ಆರ್.ಎಸ್. ಕನವಳ್ಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೀರಣ್ಣಗೌಡ ಪಾಟೀಲ, ಆಹಾರ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ, ಶಾಲಾ ಮತ್ತು ಶಿಕ್ಷಣ ಇಲಾಖೆ, ಲೋಕೊಪಯೋಗಿ ಇಲಾಖೆ, ಜಿಲ್ಲಾ ಖಾದಿಗ್ರಾಮೋದ್ಯೋಗ ಇಲಾಖೆ ಮತ್ತು ಇತರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಧಾರವಾಡ ಕೃಷಿ ಮೇಳ: 165 ಕ್ವಿಂಟಲ್ ಹಿಂಗಾರಿ ಬಿತ್ತನೆ ಬೀಜ ಮಾರಾಟ

ಧಾರವಾಡ : ಕೃಷಿ ಮೇಳದ ಮೊದಲನೇ ದಿನ ಬೀಜ ಘಟಕದಿಂದ 165 ಕ್ವಿಂಟಲ್ ಹಿಂಗಾರಿ ಬೆಳೆ ಬಿತ್ತನೆ ಬೀಜಗಳು ಮತ್ತು 27 ಕೆ.ಜಿ ತರಕಾರಿ ಬೀಜಗಳನ್ನು ಮಾರಾಟ ಮಾಡಲಾಯಿತು.

ಒಟ್ಟು ? 16.28 ಲಕ್ಷ ಮೌಲ್ಯದ ಬೀಜಗಳನ್ನು ಮಾರಾಟ ಮಾಡಲಾಯಿತು.

ಜೋಳ, ಕಡಲೆ, ಕುಸುಬೆ, ಗೋಧಿ ಮೊದಲಾದ ಬೀಜಗಳನ್ನು ಖರೀದಿಸಿದರು. ಟೊಮೆಟೊ, ಸೌತೆ ಮೊದಲಾದ ತರಕಾರಿ ಬೀಜಗಳನ್ನು ಖರೀದಿಸಿದರು.



'ಕೃಷಿ ವಿಶ್ವವಿದ್ಯಾಲಯದ ಬೀಜ ಘಟಕದಲ್ಲಿ ಬಿತ್ತನೆ ಬೀಜಗಳನ್ನು ಖರೀದಿಸುತ್ತೇನೆ. ಇಲ್ಲಿನ ಬೀಜಗಳು ಚೆನ್ನಾಗಿರುತ್ತವೆ. ಪ್ರತಿ ವರ್ಷ ಕೃಷಿ ಮೇಳಕ್ಕೆ ಭೇಟಿ ನೀಡುತ್ತೇನೆ. ಕೃಷಿ ತಂತ್ರಜ್ಞಾನ, ಬೀಜ, ಪರಿಕರ, ಯಂತ್ರೋಪಕರಣ ಮಾಹಿತಿ ಪಡೆಯುತ್ತೇನೆ. ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸುತ್ತೇನೆ' ಎಂದು ಹಾವೇರಿಯ ರೈತ ಬಸವರಾಜ ಶಿಗ್ಗಾಂವಿ 'ಪ್ರಜಾವಾಣಿ'ಗೆ ತಿಳಿಸಿದರು.

ಹಾವೇರಿ, ಗದಗ, ಬೆಳಗಾವಿ, ಕೊಪ್ಪಳ, ವಿಜಯಪುರ ಸಹಿತ ವಿವಿಧ ಜಿಲ್ಲೆಗಳ ರೈತರು ಮೇಳಕ್ಕೆ ಭೇಟಿ ನೀಡಿದ್ದರು. ಜಾನುವಾರು ಪ್ರದರ್ಶನ, ಕೃಷಿ ವಸ್ತುಪ್ರದರ್ಶನ, ಬೀಜ ಮೇಳ, ಕೀಟ ಪ್ರಪಂಚ, ಫಲ ಪುಷ್ಪ ಪ್ರದರ್ಶನ, ಬೆಳೆ ತಾಕುಗಳನ್ನು ವೀಕ್ಷಿಸಿದರು.

'ಜೀವನವೇ ಸಂಪತ್ತು' ಕೃತಿ ಬಿಡುಗಡೆ ಸಮಾರಂಭದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಹಂಚಾಟಿ ಸಂಜೀವ್ ಕುಮಾರ್ ಅಭಿಮತ ಮೋಹನಕಾಂತ ರಂಗದಳ ರವರ 'ಜೀವನವೇ ಸಂಪತ್ತು' ಕೃತಿ ಲೋಕಾರ್ಪಣೆ ಕಾರ್ಯಕ್ರಮ

ಬೆಂಗಳೂರು : 'ಜೀವನವೇ ಸಂಪತ್ತು' ಒಂದು ಅತ್ಯುತ್ತಮ ಸಮಾಜಮುಖಿ ಕೃತಿಯಾಗಿದೆ. ಈ ಕೃತಿಯು ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ ಮತ್ತು ಸಾಮಾಜಿಕ ಆರೋಗ್ಯ ಸೇರಿದಂತೆ ವ್ಯಕ್ತಿಯ ಸಮಗ್ರ ಜೀವನಕ್ಕೆ ಅಗತ್ಯವಾದ ಅನೇಕ ಮಹತ್ವದ ವಿಚಾರಗಳನ್ನು ಒಳಗೊಂಡಿದೆ. ಸುಮಾರು 30 ವರ್ಷಗಳ ಕಾಲ ವಕೀಲರಾಗಿ, ನಂತರ ಜಿಲ್ಲಾ ನ್ಯಾಯಾಧೀಶರಾಗಿ ಹಾಗೂ ಪ್ರಸ್ತುತ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ, ವಿವಿಧ ಕೌಟುಂಬಿಕ ವಿವಾದಗಳು, ವಿಚ್ಛೇದನ ಪ್ರಕರಣಗಳು ಮತ್ತು ಒಳಜಗಳಗಳು ಹೆಚ್ಚುತ್ತಿರುವುದು ಕಂಡುಬರುತ್ತಿದೆ. ಇಂತಹ ಸಮಸ್ಯೆಗಳನ್ನು ಕಡಿಮೆ ಮಾಡಲು ಮಕ್ಕಳಿಗೆ ಬಾಲ್ಯದಿಂದಲೇ ಉತ್ತಮ ಸಂಸ್ಕಾರ, ಮಾನವೀಯ ಮೌಲ್ಯಗಳು ಹಾಗೂ ಆಧ್ಯಾತ್ಮಿಕ ಜ್ಞಾನವನ್ನು ನೀಡುವುದು ಅತ್ಯಂತ ಅಗತ್ಯ. ಈ ದೃಷ್ಟಿಯಿಂದ 'ಜೀವನವೇ ಸಂಪತ್ತು' ಕೃತಿಯಲ್ಲಿ ಯುವಜನತೆ ಮತ್ತು ಸಮಾಜಕ್ಕೆ ಅಗತ್ಯವಾದ ಅನೇಕ ಉತ್ತಮ ವಿಚಾರಗಳು ಅಡಕವಾಗಿವೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಹಂಚಾಟಿ ಸಂಜೀವ್ ಕುಮಾರ್ ಅವರು ಅಭಿಪ್ರಾಯಪಟ್ಟರು.

ಅವರು ಬೆಂಗಳೂರಿನ ದಾನೇಶ್ವರಿ ಡಿವೈನ್, 3ನೇ ಕ್ರಾಸ್, ಃಇಐಐ 7ನೇ ಹಂತ, ಮೈಲಸಂದ್ರದಲ್ಲಿ ನಡೆದ ಮೋಹನಕಾಂತ ರಂಗದಳ ರವರ 'ಜೀವನವೇ ಸಂಪತ್ತು' ಕೃತಿ ಬಿಡುಗಡೆ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.



ಬೆಂಗಳೂರು ವಿಶ್ವವಿದ್ಯಾಲಯದ ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗದ ಸಂಯೋಜಕರಾದ ಡಾ. ಎಸ್. ಶಿವಣ್ಣ ಅವರು ಮಾತನಾಡಿ ಜೀವನವನ್ನು ನಿಜವಾದ ಅರ್ಥದಲ್ಲಿ ಸಂಪನ್ನಗೊಳಿಸಲು ಅಗತ್ಯವಾದ ಹಲವು ವಿಚಾರಗಳು ,'ಜೀವನವೇ ಸಂಪತ್ತು' ಕೃತಿಯಲ್ಲಿ ಅಡಕವಾಗಿವೆ. ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರವರೆಗೂ ಎಲ್ಲ ವಯೋಮಾನದವರಿಗೂ ಈ ಪುಸ್ತಕ ಉಪಯುಕ್ತವಾಗಿದೆ ಎಂದು ತಿಳಿಸಿದರು.

ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಸಾಬಪ್ಪ ಬಿ.ಮೇಲಗಲ್ ಅವರುಕೃತಿಯನ್ನು ಪ್ರಶಂಸಿಸಿ, 'ಜೀವನವೇ ಸಂಪತ್ತು' ಒಂದು ಉತ್ತಮ ಹಾಗೂ ಸಮಾಜಕ್ಕೆ ಅಗತ್ಯವಾದ ಕೃತಿಯಾಗಿದೆ. ಜೀವನದ ಮೌಲ್ಯವನ್ನು ಅರಿತುಕೊಳ್ಳಲು ಹಾಗೂ ಉತ್ತಮ ಬದುಕಿನತ್ತ ಸಾಗಲು ಇಂತಹ ಕೃತಿಗಳು ಮಾರ್ಗದರ್ಶಿಯಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ ಮಣ್ಣೆ ಮೋಹನ್, ಅಧ್ಯಕ್ಷರು, ಜ್ಞಾನಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗ, ಬೆಂಗಳೂರು, ಅವರು 'ಜೀವನವೇ ಸಂಪತ್ತು' ಕೃತಿಯ ಕುರಿತು ಸಮಗ್ರವಾಗಿ ಮಾತನಾಡಿದರು. ಕೃತಿಯ ಉದ್ದೇಶ, ಅದರ ಸಾಮಾಜಿಕ ಪ್ರಸ್ತುತತೆ ಹಾಗೂ ಇಂದಿನ ಜೀವನದಲ್ಲಿ ಮಾನವೀಯ ಮೌಲ್ಯಗಳ ಅಗತ್ಯತೆಯನ್ನು ತಮ್ಮ ಅದ್ಭುತವಾದ ಭಾಷಣದ ಮೂಲಕ ವಿವರಿಸಿದರು.

ಅವರ ಅರ್ಥಪೂರ್ಣ ಮತ್ತು ಮನಮುಟ್ಟುವ ಮಾತುಗಳು ಸಭಿಕರಲ್ಲಿ ವಿಶೇಷ ಮೆಚ್ಚುಗೆ ಮೂಡಿಸಿದವು. ಅವರ ಭಾಷಣಕ್ಕೆ ಸಭೆಯಲ್ಲಿ ಭಾಗವಹಿಸಿದ್ದ ಗಣ್ಯರು ಹಾಗೂ ಸಾಹಿತ್ಯಾಸಕ್ತರು, ಕವಿಗಳು, ಯೋಗಾಸಕ್ತರು ಮತ್ತು ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿದರು.

ಕೃತಿಯ ಲೇಖಕರಾದ ಶ್ರೀ ಮೋಹನಕಾಂತ ರಂಗದಳ ಅವರು ತಮ್ಮ ಕೃತಿಯ ಆಶಯ ಮತ್ತು ಉದ್ದೇಶವನ್ನು ಸಭಿಕರಿಗೆ ವಿವರವಾಗಿ ಪರಿಚಯಿಸಿದರು. ಇಂದಿನ ಸಮಾಜದಲ್ಲಿ ಕಂಡುಬರುತ್ತಿರುವ ಜೀವನಶೈಲಿಯ ಬದಲಾವಣೆಗಳು, ಕುಟುಂಬ ಸಂಬಂಧಗಳಲ್ಲಿನ ಅಂತರ, ಹಿರಿಯರಿಗೆ ದೊರೆಯಬೇಕಾದ ಗೌರವದ ಕೊರತೆ ಹಾಗೂ ಇವುಗಳಿಂದ ವ್ಯಕ್ತಿಯ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಉಂಟಾಗಬಹುದಾದ ಪರಿಣಾಮಗಳ ಕುರಿತು ವಿಶ್ಲೇಷಣಾತ್ಮಕವಾಗಿ ಮಾತನಾಡಿದರು.

ಮಣ್ಣೆ ಮೋಹನ್ ಪುಸ್ತಕ ಮಾಲೆ ಮತ್ತು ಪರಿಮಳ ಪ್ರಕಾಶನದ ವತಿಯಿಂದ ನಾಡಿನ ಎಲ್ಲಾ ಉದ್ಯೋನ್ಮುಖ ಕವಿಗಳ ಕೃತಿಗಳನ್ನು ಪ್ರಕಟಿಸಿ ಲೋಕಾರ್ಪಣೆಗೊಳಿಸುತ್ತಿದ್ದೇವೆ. ಮೋಹನಕಾಂತ ರಂಗದಳ ರವರ ಜೀವನ ಜ್ಯೋತಿ ಕೃತಿಯನ್ನು ನಮ್ಮ ಪ್ರಕಾಶನದಿಂದ ಪ್ರಕಟಿಸಿ ಧರ್ಮಸ್ಥಳದಲ್ಲಿ ಬಿಡುಗಡೆಗೊಳಿಸಿದ್ದೇವೆ. ಅವರದು ಸಮಾಜಮುಖಿ ಚಿಂತನೆ ಮತ್ತು ಬರಹವಾಗಿದೆ. ಮುಂದಿನ ದಿನಗಳಲ್ಲಿ ಅವರಿಂದ ಇನ್ನಷ್ಟು ಕೃತಿಗಳು ಮೂಡಿಬರಲಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಟಿ. ಚಿಕ್ಕಪುಟ್ಟೇಗೌಡ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು, ಕನ್ನಡ ಸಾಹಿತ್ಯಪರಿಷತ್,ರಾಮನಗರಜಿಲ್ಲೆ ಇವರು ವಹಿಸಿದ್ದರು. ಅಧ್ಯಕ್ಷೀಯ ಭಾಷಣದಲ್ಲಿ ಅವರು 'ಜೀವನವೇ ಸಂಪತ್ತು' ಅತ್ಯಂತ ಮಹತ್ವದ ಕೃತಿಯಾಗಿದ್ದು, ವಿಶೇಷವಾಗಿ ಹೈಸ್ಕೂಲ್ ವಿದ್ಯಾರ್ಥಿಗಳು ಓದಲೇಬೇಕಾದ ಪುಸ್ತಕ ಎಂದು ಅಭಿಪ್ರಾಯಪಟ್ಟರು. ಪ್ರಿಯಾ ಎಸ್, ವಿಜೇತ ಎ ಮತ್ತು ತೃಪ್ತಿ ರಂಗದಳ ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಡಾ ಎಂ ಶಿವಸ್ವಾಮಿಯವರು ಪ್ರಾರ್ಥನೆ ನೆರವೇರಿಸಿದರು.

ವರದಿ: ಮಣ್ಣೆ ಮೋಹನ್

ವಿಜಯಪುರದಲ್ಲಿ 18 ಸಾವಿರ ಸಂಶಯಾಸ್ಪದ ಮತದಾರರು; ಬಿಜೆಪಿ ನಾಯಕರ ಆಕ್ಷೇಪಣೆ



ವಿಜಯಪುರ: 'ವಿಜಯಪುರ ನಗರ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆ ವೇಳೆ ಆಗಿರುವ ಕಂಡುಬಂದಿರುವ ಸುಮಾರು 18 ಸಾವಿರ ಸಂಶಯಾಸ್ಪದ ಹೆಸರುಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಆಯೋಗ–ಕ್ಕೆ ಫಾರ್ಮ್ 7 ಅರ್ಜಿಯನ್ನು ಸಲ್ಲಿಸಿದ್ದೇವೆ' ಎಂದು ಬಿಜೆಪಿ ವಿಜಯಪುರ ನಗರ ಮಂಡಲದ ಮಾಜಿ ಅಧ್ಯಕ್ಷ ಶಂಕರ ಹೂಗಾರ ತಿಳಿಸಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೆಸರು, ತಂದೆ ಹೆಸರು, ತಾಯಿ ಹೆಸರು, ವಿಳಾಸ, ಮೊಬೈಲ್ ಸಂಖ್ಯೆಯನ್ನು ಸರಿಯಾಗಿ ನೀಡದೇ ಇರುವ ಹೆಸರುಗಳನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಆಯೋಗ–ಕ್ಕೆ ಅರ್ಜಿ ಸಲ್ಲಿಸಿದ್ದೇವೆಯೇ ಹೊತು, ಕೇವಲ ಮುಸ್ಲಿಂ ಮತದಾರರರನನು ಗುರಿಯಾಗಿಸಿಲ್ಲ.

ಎಲ್ಲ ಸಮಾಜಕ್ಕೆ ಸೇರಿರುವ ಹೆಸರುಗಳು ಇದರಲ್ಲಿ ಇವೆ. ಈ ಬಗ್ಗೆ ಆಯೋಗ ಸೂಕ್ತ ಕ್ರಮಕೈಗೊಳ್ಳಲಿದೆ' ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರು ಬಿಎಲ್‌ಒ ಮತ್ತು ನಮ್ಮನ್ನು ಅಂಜಿಸುವ ಕೆಲಸ ಮಾಡುತ್ತಿದ್ದಾರೆ. ನಿಮ್ಮ ಗುಂಡಾಗಿರಿಯನ್ನು ಜನರ ಮುಂದೆ ಬಹಿರಂಗ ಮಾಡುತ್ತೇವೆ. ನೈಜ ಮತದಾರರ ಪಟ್ಟಿ ಪ್ರಕಟವಾಗುವವರೆಗೂ ನಾವು ಕಾನೂನು, ಕೋರ್ಟ್ ಮೂಲಕ ಹೋರಾಟ ಮಾಡುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಮಹಾನಗರ ಪಾಲಿಕೆ ಸದಸ್ಯರಾದ ಗಿರೀಶ ಪಾಟೀಲ ಮಾತನಾಡಿ, 'ವಿಜಯಪುರ ನಗರ ಕ್ಷೇತ್ರದಲ್ಲಿ ಸಾಕಷ್ಟು ನಕಲಿ ಮತದಾರರು ಇದ್ದು, ನಕಲಿ ಅಥವಾ ಡುಪ್ಲಿಕೇಟ್ ಹೆಸರುಗಳನ್ನು ಎಸ್‌ಐಆರ್ ಪ್ರಕ್ರಿಯೆ ವೇಳೆ ಕೈಬಿಡುವಂತೆ ಕೋರಿ ಫಾರ್ಮ್ 7 ಅರ್ಜಿ ಸಲ್ಲಿಸಿದ್ದೇವೆ. ಚುನಾವಣಾ ಆಯೋಗ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವ ವಿಶ್ವಾಸ ಇದೆ' ಎಂದರು.

ಚುನಾವಣಾ ಆಯೋಗವೇ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಲೋಪ?ದೋಷ ಕಂಡುಬಂದರೆ ಅಥವಾ ನಕಲಿ ಮತದಾರರು ಕಂಡುಬಂದರೆ ಫಾರ್ಮ್ 7 ಮೂಲಕ ಆಕ್ಷೇಪಣಾ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವಾಗ ಕಾಂಗ್ರೆಸ್ ಮುಖಂಡರು ಈ ವಿಷಯದಲ್ಲಿ ಗೊಂದಲ ಸೃಷ್ಟಿಸಿ, ಆಕ್ಷೇಪ ಎತ್ತಿರುವುದು ಏಕೆ' ಎಂದು ಪ್ರಶ್ನಿಸಿದರು.

ಕಾನೂನು ಚೌಕಟ್ಟಿನೊಳಗೆ ನಾವು ಫಾರ್ಮ್ 7 ಸಲ್ಲಿಸಿದ್ದೇವೆ. ಆದರೆ, ಕಾಂಗ್ರೆಸ್ ಮುಖಂಡರು ಬಿಎಲ್‌ಒಗಳಿಗೆ ತೊಂದ–ರೆ ನೀಡಿ, ನಾವು ಸಲ್ಲಿಸಿರುವ ಆಕ್ಷೇಪಣಾ ಅರ್ಜಿಗಳನ್ನು ಕಸಿದುಕೊಳ್ಳುತ್ತಿದ್ದಾರೆ' ಎಂದು ಆರೋಪಿಸಿದರು.

ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ಆಕ್ಷೇಪಣೆ ಇದ್ದರೆ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸುವುದು ಬಿಟ್ಟು ಕಾಂಗ್ರೆಸ್ ಮುಖಂಡರು ಗುಂಡಾಗಿರಿ ಮಾಡುತ್ತಿರುವುದು ಖಂಡನೀಯ' ಎಂದರು.

ಸತ್ತವರು, ಸ್ಥಳಾಂತರ ಆದವರು, ಡುಪ್ಲಿಕೇಟ್,ನಕಲಿಮತದಾರರನ್ನು ಎಸ್‌ಐಆರ್ ಪ್ರಕ್ರಿಯೆಯಿಂದ ಕೈಬಿಡಬೇಕು ಮತದಾರರ ಪಟ್ಟಿ ಸ್ವಚ್ಛವಾಗಬೇಕು ಎಂಬುದು ಆಯೋಗದ ಉದ್ದೇಶವಾಗಿದೆ. ಆದರೆ, ಕಾಂಗ್ರೆಸ್ ಮುಖಂಡರು ನಕಲಿ ಮತದಾರರನ್ನು ಪಟ್ಟಿಗೆ ಸೇರಿಸುವ ಪ್ರಯತ್ನ ನಡೆಸಿದ್ದಾರೆ' ಎಂದು ಆರೋಪಿಸಿದರು.

ಮಹಾನಗರ ಪಾಲಿಕೆ ಸದಸ್ಯರಾದ ರಾಜು ಮಗ್ಗಿಮಠ, ರಾಜಶೇಖರ ಕುರಿಯವರ, ಮಲ್ಲಿಕಾರ್ಜುನ ಗಡಗಿ, ಶಿವರುದ್ರ ಬಾಗಲಕೋಟೆ, ರಾಹುಲ ಜಾಧವ, ಪಾಲಿಕೆ ಮಾಜಿ ಉಪ ಮೇಯರ್ ರಾಜೇಶ ದೇವಗಿರಿ, ಸ್ವಾಮಿ ವಿವೇಕಾನಂದ ಸೇನೆಯ ಅಧ್ಯಕ್ಷ ಚಂದ್ರಶೇಖರ ಚೌಧರಿ, ಮುಖಂಡ ಆನಂದ ಕೋರಿ ಇದ್ದರು.

ಹತಾಷಭಾವನೆಯಿಂದ ನಡಹಳ್ಳಿ ಹೋರಾಟ: ಪ್ರಭುಗೌಡ



ತಾಳಿಕೋಟೆ: ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಯಾವುದೇ ವಿಷಯದ ಕುರಿತು ಮಾಹಿತಿ ಪಡೆಯುವುದು ಸುಲಭವಿದೆ ಇದು ಮಾಜಿ ಶಾಸಕ ಎ.ಎಸ್.ಪಾಟೀಲ(ನಡಹಳ್ಳಿ) ಅವರಿಗೆ ಗೊತ್ತಿದ್ದರೂ ರೈತರ ವಿಷಯದಲ್ಲಿ ರಾಜಕಾರಣ ಮಾಡಲು ಮುಂದಾಗಿದುದ್ದು ಸರಿಯಲ್ಲಾವೆಂದು ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ ಅವರು ಹೇಳಿದರು.

ಮಂಗಳವಾರರಂದು ಪಟ್ಟಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಸದಾ 15 ವರ್ಷಗಳಿಂದ ಅಧಿಕಾರದ ಮದದಲ್ಲಿದ್ದ ಎ.ಎಸ್.ಪಾಟೀಲ(ನಡಹಳ್ಳಿ) ಅವರು ನಾಡಗೌಡರ ವಿರೂದ್ದ ಸೋಲುಂಡ ಮೇಲೆ ಮಾನಸಿಕ ಸ್ಥಿತಿಮಿತಿಯನ್ನು ಕಳೆದುಕೊಂಡವರಂತೆ ವರ್ತಿಸುತ್ತಿದ್ದಾರೆ ಯಾವಾಗಲು ಶಾಸಕ ನಾಡಗೌಡರ ವಿರೂದ್ದ ಏರಧ್ವನಿಯಲ್ಲಿನಾಲಿಗೆಮೇಲೆಹಿಡಿತವಿಲ್ಲದೇ ಮಾತನಾಡುವದನ್ನುರೂಡಿಸಿಕೊಂಡಿದ್ದಾರೆ ಅವರ ಅಧಿಕಾರ ಕಳೆದುಕೊಂಡು ಹತಾಷರಾಗಿ ಮಾತನಾಡುತ್ತಿದ್ದಾರೆ ಇಂತಹ ದುರ್ವರ್ತನೆಯನ್ನು ಕೂಡಲೇ ನಿಲ್ಲಿಸಬೇಕೆಂದು ಹೇಳಿದ ಪ್ರಭುಗೌಡ ಮದರಕಲ್ಲ ಅವರು ಜನರನ್ನು ತಪ್ಪು ದಾರಿಗೆ ಕರೆದೊಯ್ಯುವ ಪ್ರಯತ್ನ ಯಾರಿಂದಲೂ ಆಗಬಾರದು ಬರಗಾಲ ಘೋಷಣೆಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ನಿಯಮಗಳು ಹಾಗೂ ಬರ ನಿರ್ವಹಣಾ ಕ್ರಮಗಳ ಬಗ್ಗೆ ಅರಿವು ಇಲ್ಲದ ಅವರು ರೈತರ ಹೆಸರಿನ ಮೇಲೆ ಜನರನ್ನು ಎತ್ತಿಕಟ್ಟಿಕೊಂಡು ಹೋರಾಟ ಹಾದಿ ಹಿಡಿಯುತ್ತೇವೆಂದು ಹೇಳಿರುವ ಅವರ ಹೇಳಿಕೆ ಸಂಪೂರ್ಣ ಹತಾಷಯ ಭಾವನೆಯಿಂದ ಕುಡಿದ್ದಾಗಿದೆ ಎಂದು ಅವರು ತಿಳಿಸಿದರು.

ಬರಗಾಲ ಘೋಷಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸಿರುವ ಎಸ್‌ಡಿಆರ್‌ಎಫ್ ನಿಯಮಗಳು ಪ್ರಮುಖವಾಗಿವೆ. ಮಳೆ ಕೊರತೆ ಸೇರಿದಂತೆ ಹಲವು ಮಾನದಂಡಗಳ ಆಧಾರದ ಮೇಲೆ ಬರ ಪರಿಸ್ಥಿತಿಯನ್ನು ಪರಿಗಣಿಸಲಾಗುತ್ತದೆ. ಈ ನಿಯಮಗಳನ್ನು ರಾಜ್ಯ ಸರ್ಕಾರ ಏಕಪಕ್ಷೀಯವಾಗಿ ಬದಲಾಯಿಸಲು ಸಾಧ್ಯವಿಲ್ಲ.ಕೇಂದ್ರಮತ್ತುರಾಜ್ಯಸರ್ಕಾರಗಳು ಇಂತಹ ಸಂದರ್ಭಗಳಲ್ಲಿ ಸಮನ್ವಯದಿಂದ ಕಾರ್ಯನಿರ್ವಹಿಸುವುದು ಸಹಜವಾಗಿದೆ ಕೇಂದ್ರ ಸರ್ಕಾರದ ಮಾನದಂಡಗಳಲ್ಲಿ ತಾಳಿಕೋಟೆ ತಾಲೂಕು ತೀವ್ರ ಬರಗಾಲವೆಂದು ಗುರಿತಿಸಲ್ಪಟ್ಟದ್ದರಿಂದ ಶಾಸಕ ಸಿ.ಎಸ್.ನಾಡಗೌಡ ಅಪ್ಪಾಜಿ ಅವರು ಕೂಡಲೇ ಬರ ಘೋಷಣೆ ಮಾಡಬೇಕೆಂದು ಮುಖ್ಯಮಂತ್ರಿಗಳ ಮೇಲೆ ಕಮದಾಯ ಸಚೀವರ ಮೇಲೆ ಒತ್ತಡ ಹಾಕಿ ಬರಗಾಲ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವರೊಂದಿಗೆ ಸರ್ಕಾರದಿಂದಅಧಿಕೃತಅಧಿಸೂಚನೆಯನ್ನು ಬಿಡುಗಡೆ ಗೊಳಿಸಿದ್ದಾರೆ ಶಾಸಕ ನಾಡಗೌಡ ಅವರ ಪ್ರಭುದ್ದ ರಾಜಕಾರಣಿಯಾಗಿದ್ದಾರೆ ಕಚಿಬಿಚಿ ರಾಜಕೀಯ ಎಂದೂ ಅವರು ಮಾತನಾಡಿಲ್ಲಾ ಬರಗಾಲದಂತಹ ಗಂಭೀರ ವಿಚಾರದಲ್ಲಿ ರಾಜಕೀಯ ಉದ್ದೇಶದಿಂದ ಜನರಲ್ಲಿ ಗೊಂದಲ ಸೃಷ್ಟಿಸಿ ಜನರನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡಿದ ನಡಹಳ್ಳಿ ಅವರ ಪ್ರಯತ್ನ ಸಂಪೂರ್ಣ ವಿಫಲವಾಗಿದೆ ಶಾಸಕ ನಾಡಗೌಡರು ಯಾವಾಗಲೂ ಜನರ ಪರವಾಗಿ ರೈತರ ಪರವಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ ಇಂತಹ ಕಲಬೆರಿಕೆ ರಾಜಕಾರಣಿಗಳ ಮಾತಿಗೆ ಯಾರೂ ಬೆಲೆ ಕೊಡುವ ಅಗತ್ಯವಿಲ್ಲಾವೆಂದು ಹೇಳಿದರು.

ಈ ಸಮಯದಲ್ಲಿ ಬಿ.ಎನ್.ಹಿಪ್ಪರಗಿ, ಸಿದ್ದನಗೌಡ ಪಾಟೀಲ(ನಾವದಗಿ), ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಎಂ.ಕೆ.ಚೋರಗಸ್ತಿ, ಬಿ.ಎನ್.ಹಿಪ್ಪರಗಿ, ಸಂಗನಗೌಡ ಅಸ್ಕಿ, ರೋಷನ್ ಡೋಣಿ, ಮೊದಲಾದವರು ಉಪಸ್ಥಿತರಿದ್ದರು.

ನೇಕಾರರ ಸಂಕಷ್ಟಕ್ಕೆ ಸರ್ಕಾರ ನೆರವು ಒದಗಿಸಲಿ:ಹೆಬ್ಬಾಳ



ಮುದ್ದೇಬಿಹಾಳ : ಭೀಕರ ಬರಗಾಲದ ಸಮಯದಲ್ಲಿ ನೇಕಾರರಿಗೂ ಸಮರ್ಪಕ ಕಚ್ಚಾನೂಲು,ಬೀಮ್ ಪೂರೈಕೆ ಆಗುತ್ತಿಲ್ಲ. ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನಡೆಸುವ ನೇಕಾರರು ಗ್ರಾಮೀಣ ಭಾಗದಲ್ಲಿ ಸಂಕಷ್ಟದಲ್ಲಿದ್ದು ಅವರಿಗೆ ಸರ್ಕಾರ ಸೂಕ್ತ ನೆರವು ಒದಗಿಸಬೇಕು ಎಂದು ಶ್ರೀ ಬನಶಂಕರಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಶಂಕರ ಈ.ಹೆಬ್ಬಾಳ ಹೇಳಿದರು.

ಪಟ್ಟಣದ ಶ್ರೀ ಬನಶಂಕರಿ ಪತ್ತಿನ ಸಹಕಾರಿ ಸಂಘದ ಕಚೇರಿಯಲ್ಲಿ ಮಂಗಳವಾರ ಏರ್ಪಡಿಸಿದ್ದ 27ನೇ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಅವರು ಮಾತನಾಡಿದರು.ನೇಕಾರರ ಬದುಕು ಇಂದು ತೀವ್ರ ಸಂಕಷ್ಟದಲ್ಲಿದೆ.ಅಗತ್ಯ ಕಚ್ಚಾ ನೂಲು ಬಾರದ್ದರಿಂದ ಉದ್ಯೋಗ ಇಲ್ಲದೇ ಖಾಲಿ ಕುಳಿತುಕೊಳ್ಳುವಂತಾಗಿದೆ. ಬೇರೊಂದು ಉದ್ಯೋಗ ಗೊತ್ತಿಲ್ಲದವರಿಗೆ ಸಾಕಷ್ಟು ತೊಂದರೆಯಾಗಿದೆ.ಸರ್ಕಾರ ',ಸಂಬಂಧಪಟ್ಟ ಸಚಿವರು ನೇಕಾರರ ನೆರವಿಗೆ ಬರಬೇಕು ಎಂದರು. ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ವಿ.ಎಸ್.ಪ್ಯಾಟಿಗೌಡರ ಮಾತನಾಡಿ, 2026ರ ಮಾರ್ಷ್ ಅಂತ್ಯಕ್ಕೆ 8.65 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದ್ದು ಪ್ರಸಕ್ತ ಚಾಲ್ತಿ ಸಾಲಿನಲ್ಲಿ ದುಡಿಯುವ ಬಂಡವಾಳ ಒಂದು ಕೋಟಿ ರೂ.ಗಳಿಗೂ ಅಧಿಕವಾಗಿದೆ.ಸಂಘವು 14.56 ಲಕ್ಷ ರೂ.ಲಾಭ ಮಾಡಿದೆ ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ರಮೇಶ ಹೆಬ್ಬಾಳ ಮಾತನಾಡಿ, ಬನಶಂಕರಿ ಪತ್ತಿನ ಸಹಕಾರಿ ಸಂಘದಲ್ಲಿ ಶೇರು ಹೊಂದಿರುವ ಇತ–ರೆ ಜನಾಂಗದವರ ಮಕ್ಕಳು ಎಸ್.ಎಸ್.ಎಲ್.ಸಿ,ಪಿಯುಸಿಯಲ್ಲಿ ಸಾಧನೆ ತೋರಿದ್ದಲ್ಲಿ ಮುಂದಿನ ವರ್ಷದಿಂದ ಅಂತಹ ಮಕ್ಕಳಿಗೂ ಪ್ರತಿಭಾ ಪುರಸ್ಕಾರ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ವಿಶೇಷ ಸನ್ಮಾನಿತರಾಗಿ ಆಗಮಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ ಅವರು, ಬನಶಂಕರಿ ಪತ್ತಿನ ಸಹಕಾರಿ ಸಂಘವು ನಿರಂತರವಾಗಿ 27ನೇ ವರ್ಷದಲ್ಲಿ ಪ್ರಗತಿಯತ್ತ ಸಾಗಿರುವುದು ಹೆಮ್ಮೆಯ ಸಂಗತಿ.ಸಮಾಜದವರಲ್ಲಿ ಪರಸ್ಪರ ಒಗ್ಗಟ್ಟು ಸಂಘಟನೆಯಿಂದ ಸಮಾಜದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸಬೇಕು ಎಂದರು.

ಸಂಘದ ನಾಲತವಾಡ ಶಾಖೆಯ ಸಲಹಾ ಸಮಿತಿ ಅಧ್ಯಕ್ಷ ಬಸವರಾಜ ಪಣೀಗೋಳ,ಶಿಕ್ಷಕ ಶಿವಾನಂದ ಹೆಬ್ಬಾಳ ಮಾತನಾಡಿದರು.

ಸಂಘದ ನಿರ್ದೇಶಕರಾದ ಸುಭಾಷ ರುದ್ರಗಂಟಿ,ಬಸವರಾಜ ಅಗಸಬಾಳ,ಬಸಪ್ಪ ಹುಣಶ್ಯಾಳ,ಚಂದ್ರಕಾಂತ ಹೆಬ್ಬಾಳ,ದ್ಯಾವಪ್ಪ ಹುಣಶ್ಯಾಳ,ಉಮೇಶಪ್ಯಾಟಿಗೌಡರ,ಸಂಗಪ್ಪ ಕಲ್ಲುಂಡಿ,ಶಂಕ್ರಮ್ಮ ಪ್ಯಾಟಿಗೌಡರ,ಜಯಶ್ರೀ ಹೆಬ್ಬಾಳ,ನಾಲತವಾಡ ಶಾಖೆಯ ಪ್ರಭಾರ ವ್ಯವಸ್ಥಾಪಕ ಚಂದ್ರಶೇಖರ ಪ್ಯಾಟಿಗೌಡರ, ಗಣ್ಯರಾದ ಮುತ್ತಣ್ಣ ಪ್ಯಾಟಿಗೌಡರ,ಶಂಕರಲಿಂಗ ಹುಣಶ್ಯಾಳ,ಕಾಶೀನಾಥ ಹೆಬ್ಬಾಳ,ಅಮರೇಶ ಡಂಬಳ ಸೇರಿದಂತೆ,ಮುದ್ದೇಬಿಹಾಳ,ನಾಲತವಾಡ ಶಾಖೆಗಳ ಸಲಹಾ ಸಮೀತಿ ಸದಸ್ಯರು,ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದುಕೊಂಡ ಆದರ್ಶ ಹೆಬ್ಬಾಳ,ಅರ್ಚನಾ ಪ್ಯಾಟಿಗೌಡರ,ಸೌಭಾಗ್ಯ ರುದ್ರಗಂಟಿ,ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಅಶ್ವಿನಿ ರುದ್ರಗಂಟಿ,ಕುಶಾಲ ಗುಡಗುಂಟಿ,ರಾಧಿಕಾ ಇಂಜಿಗನರಿ ಅವರಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.ಡಿ.ಬಿ.ಬೇಲಾಳ ಪ್ರಾರ್ಥನಾ ಗೀತೆ ಹಾಡಿದರು.ರಮೇಶ ಹೆಬ್ಬಾಳ ಕಾರ್ಯಕ್ರಮ ನಿರೂಪಿಸಿದರು. ದ್ಯಾವಪ್ಪ ಹುಣಶ್ಯಾಳ ವಂದಿಸಿದರು. ಕಾರ್ಯಕ್ರಮಕ್ಕೂ ಮುನ್ನ ಈಚೆಗೆ ನಿಧನರಾದ ಸಂಘದ ಪಿಗ್ಮಿ ಸಂಗ್ರಾಹಕರಾದ ಗುರಯ್ಯ ಮುದ್ನೂರಮಠ ಅವರ ನಿಧನಕ್ಕೆ ಒಂದು ನಿಮಿಷ ಮೌನಾಚರಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸ್ಮಶಾನ ಭೂಮಿ ರಕ್ಷಣೆ। ನಿರ್ಲಕ್ಷ್ಯ ಸಲ್ಲ: ವಿಜಯಪುರ ಜಿಲ್ಲಾಧಿಕಾರಿ ಎಚ್ಚರಿಕೆ



ವಿಜಯಪುರ: ಸ್ಮಶಾನಕ್ಕೆ ಜಾಗ ಸಿಗುವುದೇ ಕಷ್ಟ. ಇದ್ದ ಜಾಗೆಯನ್ನು ಸರ್ಕಾರಿ ಆಸ್ತಿಯಾಗಿದ್ದು ಅದನ್ನು ಹದ್ದು ಬಸ್ತು ಮಾಡಿ ಸಂರಕ್ಷಣೆ ಮಾಡೊಕೊಳ್ಳಿ. ಈ ವಿಷಯದಲ್ಲಿ ನಿರ್ಲಕ್ಷ್ಯ ಸಲ್ಲದು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ದೌರ್ಜನ್ಯ ನಿಯಂತ್ರಣ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಒಂದು ವೇಳೆ ಸ್ಮಶಾನ ಒತ್ತುವರಿಯಾಗಿದ್ದಲ್ಲಿ ತಕ್ಷಣ ತೆರವುಗೊಳಿಸಬೇಕು. ಇಲ್ಲದಿದ್ದರೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು, ಒತ್ತುವರಿಯಾಗಿದ್ದಲ್ಲಿ ಪೊಲೀಸ್ ನೆರವು ಪಡೆದು–ಕೊಂಡು, ಎರಡು ವಾರಗದೊಳಗೆ ತೆರವು ಮಾಡಿ, ವರದಿ ಸಲ್ಲಿಸಬೇಕು ಎಂದರು.

ಪರಿಶಿಷ್ಟಜಾತಿ ಸಮುದಾಯದ ಕಾಲೊನಿಯ ಪಕ್ಕದಲ್ಲಿ ಹರಾಜು ಪ್ರಕ್ರಿಯೆ ನಡೆಯುತ್ತಿದ್ದು, ಕಾಲೊನಿಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದರಿಂದ ಸ್ಥಳ ಬೇರೆಡೆ ಸ್ಥಳಾಂತರಿಸಲು ಸದಸ್ಯರ ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಸೂಚಿಸಿದರು.

ಜಮೀನಿಗೆ ಸಂಬಂಧಿಸಿದ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಕಲ್ಪಿಸಿಕೊಡಬೇಕು ಎಂದು ಸದಸ್ಯ ಅಭಿಷೇಕ ಚಕ್ರವರ್ತಿ ಸಭೆಗೆ ಮನವಿ ಮಾಡಿದರು.

ಮಹನೀಯರ ಪುತ್ಥಳಿ ಹತ್ತಿರ ಇರುವ ವಿದ್ಯುತ್ ಪರಿವರ್ತಕ ಬದಲಾಯಿಸಲು ಹಾಗೂ ಆ ಸ್ಥಳದಲ್ಲಿ ಸಿಸಿಟಿವಿ ಅಳವಡಿಸಬೇಕು ಎಂದು ಇತರೆ ಸದಸ್ಯರು ಸಭೆಯ ಗಮನಸೆಳೆದರು.

ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಜಮೀನು ಹಂಚಿಕೆಯಾಗಿರುವ ಮೂಲಸೌಕರ್ಯ ಒದಗಿಸಬೇಕು ಎಂದು ಜಿಲ್ಲಾಧಿಕಾರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಸತಿಶಾಲೆಯಲ್ಲಿಕುಡಿಯುವನೀರುಸೇರಿದಂತೆಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲು ಸೂಚಿಸಲಾಯಿತು. ಸಭೆಯಲ್ಲಿ ಚರ್ಚೆಯಾದ ವಿಷಯದ ಸಮಸ್ಯೆಗಳನ್ನು ತಕ್ಷಣ ಇತ್ಯರ್ಥಪಡಿಸಬೇಕು ಎಂದು ಸಭೆಯಲ್ಲಿದ್ದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ದೌರ್ಜನ್ಯ ಪ್ರಕರಣಗಳಲ್ಲಿ ವಿಳಂಬ ಮಾಡದೇ ಪರಿಹಾರ ಒದಗಿಸಬೇಕು ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ವಿಜಯಪುರ ಉಪ ವಿಭಾಗಾಧಿಕಾರಿ ಜುಫಿಶಾನ್ ಹಕ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೋತದಾರ, ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಅಭಿಷೇಕ ಚಕ್ರವರ್ತಿ, ರವಿಕಾಂತ ಬಿರಾದಾರ, ಸಿದ್ದು ರಾಯಣ್ಣವರ, ಬಂದಗಿ ಸಿದ್ದಪ್ಪ ಗಸ್ತಿ, ಮಹಾಂತೇಶ ಸಾಸಬಾಳ, ಯಮನಪ್ಪ ಸಿದರಡ್ಡಿ, ಮಲ್ಲು ತಳವಾರ, ರಾಜಶೇಖರ ಚೌರ, ರಾಜಶೇಖರ ಕೂಚಬಾಳ ಇದ್ದರು.

ಹಾವು ಕಡಿತ ತಡೆಗಟ್ಟುವಿಕೆ, ನಿಯಂತ್ರಣ ಜಾಗೃತಿ ಕಾರ್ಯಕ್ರಮ



ಗಂಗಾವತಿ: ನಗರದ ಪ್ರಾಥಮಿಕ ಆರೋಗ್ಯ ಕೇಂದ್ರ–1ರಲ್ಲಿ ರಾಷ್ಟ್ರೀಯ ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮದಡಿ ಸಾರ್ವಜನಿಕ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.

ವೈದ್ಯ ಡಾ.ಸಾಯಿ ಸಾತ್ವಿಕ್ ಮಾತನಾಡಿ, 'ಹಾವು ಕಡಿತ ಸಂಭವಿಸಿದ ಸಂದರ್ಭದಲ್ಲಿ, ವ್ಯಕ್ತಿ ಭಯಪಡದೆ ತಕ್ಷಣವೇ ಸಮೀಪದ ಆರೋಗ್ಯ ಕೇಂದ್ರ, ಸರ್ಕಾರಿ ಆಸ್ಪತ್ರೆಗೆತೆರಳಿಸೂಕ್ತವೈದ್ಯಕೀಯಚಿಕಿತ್ಸೆಪಡೆಯಬೇಕು' ಎಂದು ಹೇಳಿದರು.

ಆರೋಗ್ಯ ಶಿಕ್ಷಣಾಧಿಕಾರಿ ಆಶಾ ಬೇಗಂ ಮಾತನಾಡಿ, 'ಮಳೆಗಾಲ ಸೇರಿ ಬೇಸಿಗೆಯಲ್ಲಿ ಹಾವುಗಳ ಸಂಚಾರ ಹೆಚ್ಚಾಗಿರಲಿದ್ದು, ಈ ವೇಳೆಯಲ್ಲಿ ಸಾರ್ವಜನಿಕರು ಹೆಚ್ಚಿನ ಜಾಗ್ರತೆ ವಹಿಸಬೇಕು. ಹಾವು ಕಡಿತಕ್ಕೆ ಒಳಗಾದ ವ್ಯಕ್ತಿಗೆ ಯಾವುದೇ ಮನೆಮದ್ದು, ಮೂಢನಂಬಿಕೆ ಕ್ರಮಗಳು ಅನುಸರಿಸದೆ ಕೂಡಲೇ ಆಸ್ಪತ್ರೆಗೆ ಕರೆದೊಯ್ಯಬೇಕು' ಎಂದರು. ಆರೋಗ್ಯ ಸಿಬ್ಬಂದಿ ಬಿಂದು, ರಾಜಾಸಾಬ, ಎಚ್.ಸುರೇಶ, ವೀರೇಶ, ರಮೇಶ, ಮಾಯಾ, ಶಾಂತ ಇತರರು ಇದ್ದರು.

ಪೌರಕಾರ್ಮಿಕರಿಗೆ ಸುರಕ್ಷತೆ, ಸೌಲಭ್ಯ ಒದಗಿಸಿ: ಜುಫಿಶಾನ್ ಹಕ್



ವಿಜಯಪುರ: ನಗರ, ಪಟ್ಟಣಗಳ ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುವ ಪೌರಕಾರ್ಮಿಕರ ಹಿತರಕ್ಷಣೆ ಹಾಗೂ ಅವರಿಗೆ ಸರ್ಕಾರದ ಸವಲತ್ತುಗಳು ಸಮರ್ಪಕವಾಗಿ ತಲುಪಿಸಿ ಅವರ ಜೀವನ ಮಟ್ಟ ಸುಧಾರಣೆಗೆ ಆದ್ಯತೆ ನೀಡಬೇಕು ಎಂದು ವಿಜಯಪುರ ಉಪವಿಭಾಗಾಧಿಕಾರಿ ಜುಫಿಶಾನ್ ಹಕ್ ತಿಳಿಸಿದರು.

ನಗರದ ಉಪ ವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಉಪವಿಭಾಗ ಮಟ್ಟದ ಸಫಾಯಿ ಕರ್ಮಚಾರಿ, ಜಾಗೃತಿ ಹಾಗೂ ಉಸ್ತುವಾರಿ ಸಮಿತಿ ದೌರ್ಜನ್ಯ ತಡೆ ಮತ್ತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರು ಮತ್ತು ಸ್ವಚ್ಛತಾ ಸಿಬ್ಬಂದಿಗೆ ಗುಣಮಟ್ಟದ ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಒದಗಿಸಬೇಕು ಎಂದು ಸೂಚಿಸಿದರು.

ಅರ್ಹ ಪೌರ ಕಾರ್ಮಿಕರಿಗೆ ವಸತಿ ಸೌಲಭ್ಯ ಒದಗಿಸಿಅವರಕುಟುಂಬದಅವಲಂಬಿತರಿಗೆ ಕೌಶಲಾಭಿವೃದ್ಧಿ ತರಬೇತಿ ಹಾಗೂ ಆರ್ಥಿಕ ನೆರವು ಒದಗಿಸಿ ಸ್ವಾವಲಂಬಿಗಳನ್ನಾಗಿಸಲು ಪೌರ ಕಾರ್ಮಿಕರ ಕುಂದುಕೊರತೆ ಹಾಗೂ ದೂರುಗಳಿಗೆ ತಕ್ಷಣ ಸ್ಪಂದಿಸಬೇಕು. ಅವರ ಅಹವಾಲುಗಳನ್ನುಆಲಿಸಿ,ಪರಿಹರಿಸಬೇಕು. ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹರಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ–ದರು.

ಉಪವಿಭಾಗಮಟ್ಟದಸಫಾಯಿಕರ್ಮಚಾರಿ ಸಮಿತಿಯ ನಾಮನಿರ್ದೇಶಿತ ಸದಸ್ಯರಾದ ಭೀಮರಾಯ ಜಿಗಜಿಣಗಿ, ಪರಶುರಾಮ ಪಡಗಾರ್ ಹಾಗೂ ಜಾಗೃತಿ ಸಮಿತಿಯ ನಾಮನಿರ್ದೇಶಿತ ಸದಸ್ಯರಾದ ಮಳಸಿದ್ದ ನಾಯ್ಕೋಡಿ,
ಅರವಿಂದ ಡಿ. ಸಾಲವಾಡಗಿ, ಮಹದೇವಪ್ಪ ಸಿ.ಕಾಂಬಳೆಮತ್ತುಪ್ರಸಾದಧನಸಿಂಗಅವರು ಭಾಗವಹಿಸಿ ಸಲಹೆ–ಸೂಚನೆಗಳನ್ನು ನೀಡಿದರು.

ಸಭೆಯಲ್ಲಿತಹಶೀಲ್ದಾರರು,ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು, ಪೌರಾಯುಕ್ತರು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಪೊಲೀಸ್ ಉಪಾಧೀಕ್ಷಕರು, ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಉಪಸ್ಥಿತರಿದ್ದರು.

ಆಯುರ್ವೇದ ವೈದ್ಯ ಪದ್ಧತಿ ಹಳ್ಳಿ ಹಳ್ಳಿಗಳಿಗೂ ತಲುಪಲಿ



ವಿಜಯಪುರ: ಆಯುರ್ವೇದ ವೈದ್ಯ ಪದ್ಧತಿ ನಗರ ಪ್ರದೇಶಗಳಿಗೆ ಸೀಮಿತವಾಗದೇ ಹಳ್ಳಿ ಹಳ್ಳಿಗಳಿಗೂ ತಲುಪಿ ವ್ಯಾಪಕವಾಗಿ ಪ್ರಚಾರಗೊಳ್ಳಬೇಕು. ಪ್ರತಿಯೊಬ್ಬರೂ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು ಆಯುರ್ವೇದ ಪದ್ಧತಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಂಗಾಧರ ಸಂಬಣ್ಣಿ ಹೇಳಿದರು.

ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ ಸರ್ಕಾರಿ ಎಎನ್‌ಎಂ–ಜಿಎನ್‌ಎಂ ತರಬೇತಿ ಸಂಸ್ಥೆಯಲ್ಲಿ 'ಆರೋಗ್ಯಕರ ನಾಳೆಗಳಿಗಾಗಿ ಆಯುರ್ವೇದ' ಎಂಬ ಘೋಷವಾಕ್ಯದೊಂದಿಗೆ ಆಯೋಜಿಸಿದ್ದ 11ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ
ಉದ್ಘಾಟಿಸಿ ಅವರು ಮಾತನಾಡಿದರು.

ಧನರ್ಗಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ವೈದ್ಯಾಧಿಕಾರಿ ಡಾ. ಭುವನೇಶ್ವರಿ ಬೇಳಕುಡಕರ ಮಾತನಾಡಿ, ಬದಲಾಗುತ್ತಿರುವ ಜೀವನಶೈಲಿಯಿಂದ ಮಕ್ಕಳಲ್ಲಿ ಬೊಜ್ಜು, ಯುವಕರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಹಾಗೂ ಮಧ್ಯವಯಸ್ಕರಲ್ಲಿ ರಕ್ತದೊತ್ತಡ, ಮಧುಮೇಹ ಮತ್ತು ಕೀಲುನೋವು ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ.

ಇವುಗಳ ನಿಯಂತ್ರಣ–ಕ್ಕೆ ಸೂಕ್ತ ಜೀವನಶೈಲಿ,ಯೋಗಾಸನ, ಪ್ರಾಣಾಯಾಮ,ಧ್ಯಾನ ಪಾಲಿಸುವುದು ಅಗತ್ಯ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಂ.ಬಿ. ಬಿರಾದಾರ ಮಾತನಾಡಿ, ಆಯುರ್ವೇದ ವಿದ್ಯಾರ್ಥಿಗಳು ತಮ್ಮ ವೃತ್ತಿ ಜೀವನದಲ್ಲಿ ಈ ಪದ್ಧತಿಯ ತತ್ವಗಳನ್ನು ಅಳವಡಿಸಿಕೊಂಡು ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸಬೇಕು.

ದೀರ್ಘಕಾಲಿಕ ಆರೋಗ್ಯ ಸಮಸ್ಯೆಗಳ ನಿರ್ವಹಣೆಯಲ್ಲಿ ಆಯುರ್ವೇದದ ಮಹತ್ವವನ್ನು ಅರಿತುಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ. ವಿದ್ಯಾವತಿ ಎಂ.ಅಥಣಿ ಮಾತನಾಡಿ, ಆಯುರ್ವೇದದ ಮಹತ್ವವನ್ನು ಸಾರ್ವಜನಿಕರಿಗೆ ತಲುಪಿಸುವುದು ದಿನಾಚರಣೆಯ ಉದ್ದೇಶವಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿ ಡಾ. ಬಿ.ಜಿ. ಪಾಟೀಲ ಅವರು ಆಯುರ್ವೇದ ಔಷಧಿಗಳ ಬಳಕೆ ಹಾಗೂ ಮನೆಮದ್ದುಗಳ ಕುರಿತು ಪ್ರಾತ್ಯಕ್ಷಿಕೆ ನೀಡಿದರು.

ಬಿ.ಎಲ್.ಡಿ.ಇ. ಆಯುರ್ವೇದ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಕೆ.ಎ. ಪಾಟೀಲ ಅವರು ಆರೋಗ್ಯಕರ ಆಹಾರ ಪದ್ಧತಿ ಹಾಗೂ ಜೀವನಶೈಲಿ ಕುರಿತು ಉಪನ್ಯಾಸ ನೀಡಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಎಸ್. ಹೊನಮೊಡೆ, ಜಿಎನ್‌ಎಂ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಮಹಾಂತೇಶ ಸುರಪುರಮಠ, ಲೋಹಗಾಂವ ಮಾಜಿ ಗ್ರಾ.ಪಂ. ಅಧ್ಯಕ್ಷ ರಾಜುಗೌಡ ಬಿರಾದಾರ ಹಾಗೂ ಡಾ. ಎಂ.ಎ. ಹಿರೇಮಠ, ಡಾ. ವಿ.ಬಿ.ದೇಸಾಯಿ,ಡಾ. ಬಿ.ಎನ್. ವಗದುರ್ಗಿ ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನ ಸೌಲಭ್ಯ ಬಳಸಿಕೊಳ್ಳಲು ವಿಜಯಪುರ ಸಮಾಜ ಕಲ್ಯಾಣಾಧಿಕಾರಿ ಕರೆ

ಇಂಡಿ: 'ಸರ್ಕಾರದಿಂದ ಲಭ್ಯವಿರುವ ವಿವಿಧ ವಿದ್ಯಾರ್ಥಿವೇತನ ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಅರ್ಜಿ ಸಲ್ಲಿಕೆ ವಿಧಾನ, ಅರ್ಹತೆ ಹಾಗೂ ಅಗತ್ಯ ದಾಖಲೆಗಳ ಕುರಿತು ಸರಿಯಾದ ಮಾಹಿತಿ ಹೊಂದಿರಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈಗಿನಿಂದಲೇಸಿದ್ಧತೆನಡೆಸಬೇಕು' ಎಂದು ವಿಜಯಪುರ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮಹೇಶ್ ಪೊದ್ದಾರ್ ಹೇಳಿದರು.

ಗುರುವಾರ ನಗರದ ಜಿ.ಆರ್. ಗಾಂಧಿ ಕಲಾ, ವೈ.ಎ.ಪಾಟೀಲ ವಾಣಿಜ್ಯ ಹಾಗೂ ಎಂ.ಪಿ. ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ, ಎಸ್ಸಿ ಮತ್ತು ಎಸ್ಟಿ ಕಲ್ಯಾಣ ಘಟಕ ಹಾಗೂ ವಿದ್ಯಾರ್ಥಿವೇತನ ಘಟಕದ ವತಿಯಿಂದ ವಿಜಯಪುರದ ಮಾನವ ವಿಕಾಸ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ವಿದ್ಯಾರ್ಥಿವೇತನಕ್ಕೆ ಹೇಗೆ ಅರ್ಜಿಸಲ್ಲಿಸಬೇಕು ಎಂಬ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಎಸ್.ಜಿ.ಸಣ್ಣಕ್ಕಿಮಾತನಾಡಿದರು. ಮಾನವ ವಿಕಾಸ ಕೇಂದ್ರ ಕಾರ್ಯದರ್ಶಿ ಜ್ಞಾನೇಶ್ವರ ಎಸ್. ಧುಲಖೇಡ, ಜಯಪ್ರಸಾದ್ ಡಿ., ವಿ.ಎ.ಕೋರವಾರ ಉಪಸ್ಥಿತರಿದ್ದರು.

ಯಶಸ್ವಿನಿ ನಕಲಿ ಕಾರ್ಡ್ ವಿತರಣೆ: ದೂರು ದಾಖಲು



ಯಲಬುರ್ಗಾ: ತಾಲ್ಲೂಕಿನ ಹಿರೇಮ್ಯಾಗೇರಿ, ಎಚ್.ಸೊಂಪೂರ ಹಾಗೂ ಸಂಕನೂರು ಗ್ರಾಮದಲ್ಲಿ ಜನರಿಂದ ಹಣ ಪಡೆದು ನಕಲಿ ಯಶಸ್ವಿನಿ ಆರೋಗ್ಯ ಕಾರ್ಡ್ ವಿತರಿಸುವ ಮೂಲಕ ಲಕ್ಷಾಂತರ ರೂಪಾಯಿ ವಂಚಿಸಿದ ಪ್ರಕರಣ ಬಯಲಿಗೆ ಬಂದಿದೆ.

ಹಿರೇಮ್ಯಾಗೇರಿ ಗ್ರಾ.ಪಂ ಪಿಡಿಒ ಮಂಗಳೇಶಪ್ಪ ನೀಡಿದ ದೂರಿನನ್ವಯ ಐವರ ವಿರುದ್ಧ ಮಂಗಳವಾರ ಯಲಬುರ್ಗಾ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹಿನ್ನೆಲೆ: 'ಯಶಸ್ವಿನಿ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆ' ಎಂಬ ಸಂಸ್ಥೆಯವರು ಕಳೆದ 15 ದಿನಗಳ ಹಿಂದೆಯೇ ಹಳ್ಳಿಗಳಲ್ಲಿ ಆರೋಗ್ಯ ಕಾರ್ಡ್ ಮಾಡಿಕೊಡುವುದಾಗಿ ಪಂಚಾಯಿತಿ ಸಿಬ್ಬಂದಿಯ ಸಹಯೋಗದಲ್ಲಿ ಕಾರ್ಯಾಚರಣೆಗೆ ಮುಂದಾಗಿದ್ದಾರೆ. ಪ್ರಾರಂಭದಲ್ಲಿ ಜನರಿಂದ ಭಾವಚಿತ್ರ, ಆಧಾರ್ ಹಾಗೂ ಪಡಿತರ ಕಾರ್ಡ್‌ಗಳ ಜೆರಾಕ್ಸ್ ಪ್ರತಿಗಳನ್ನು ಪಡೆದುಕೊಂಡು ಹೋಗಿದ್ದಾರೆ.

ಜನರಿಗೆ ಕಾರ್ಡ್ ವಿತರಿಸುವ ಸಂದರ್ಭದಲ್ಲಿ ತಲಾ 300 ವಸೂಲಿ ಮಾಡಿದ್ದಾರೆ. ಹೀಗೆ ಹಿರೇಮ್ಯಾಗೇರಿ ಸೇರದಂತೆ ವಿವಿಧ ಗ್ರಾಮಗಳಲ್ಲಿ 1500ರಿಂದ 2000 ಸಂಖ್ಯೆಯಲ್ಲಿ ಕಾರ್ಡ್ ವಿತರಣೆಗೆ ಮುಂದಾಗಿದ್ದು, ಈಗಾಗಲೇ ಬಹುತೇಕರಿಗೆ ಕಾರ್ಡ್ ಹಂಚಿಕೆ ಮಾಡಿ ಹಣ ಪಡೆದುಕೊಂಡಿದ್ದಾರೆ ಎಂದು ಗ್ರಾಮದ ಐದು ಕಾರ್ಡ್ ಹೊಂದಿರುವ ಶಿವಪ್ಪ ಮ್ಯಾಗೇರಿ ತಿಳಿಸಿದ್ದಾರೆ.

ಗ್ರಾಮದ ಜಗದೀಶ ಶಿವಪುತ್ರಪ್ಪ ಜಮಖಂಡಿಯವರು ಕಾರ್ಡಿನ ನೈಜತೆಯನ್ನು ಪರಿಶೀಲನೆಗೆ ಒಳಪಡಿಸಿದಾಗ ಕಾರ್ಡ್‌ಗಳು ನಕಲಿ ಎಂದು ಗೊತ್ತಾಗಿದೆ.

ಇದನ್ನು ಪಿಡಿಒ ಗಮನಕ್ಕೆ ತಂದು, ಇಬ್ಬರು ಸೇರಿ ಕಾರ್ಡ್ ವಿತರಿಸುವ ವ್ಯಕ್ತಿಗಳನ್ನು ಪಂಚಾಯಿತಿಗೆ ಕರೆತಂದು ಕೂಡಿಹಾಕಿದ್ದಾರೆ. ಸುದ್ದಿ ಹರಡುತ್ತಿದ್ದಂತೆ ಕಾರ್ಡ್ ಖರೀದಿಸಿದವರು ಪಂಚಾಯಿತಿ ಕಚೇರಿ ಆವರಣದಲ್ಲಿ ಜಮಾವಣೆಗೊಂಡು ಹಣವನ್ನು ವಾಪಸ್ ಪಡೆಯಲು ದುಂಬಾಲು ಬಿದ್ದಿದ್ದಾರೆ.

ಕೂಡಿಹಾಕಿದ್ದ ಇಬ್ಬರನ್ನು ಹೊರತುಪಡಿಸಿ ಇನ್ನೂ ಮೂರ್ನಾಲ್ಕು ಜನರಿರುವ ಬಗ್ಗೆ ಮಾಹಿತಿ ನೀಡಿರುವ ಹಿನ್ನೆಲೆಯಲ್ಲಿ ಹನಮಂತಪ್ಪ ಫಕೀರಪ್ಪ ಬಂಕನೇರಿ, ದೇವೆಂದ್ರಪ್ಪ ಹನುಮಪ್ಪ ಮಲ್ಲಾಪೂರ, ಸವಿತಾ ಸಿದ್ದಪ್ಪ ಖವಾಸ್ತ್ರ, ಮಲ್ಲಿಕಾರ್ಜುನ ಲಿಂಬಿಕಾಯಿ ಸಾ.ಅಣ್ಣಿಗೇರಿ, ಮಹಾಂತೇಶ ತಮ್ಮಣ್ಣ ಕಡ್ಲಿಕೊಪ್ಪ ಇವರ ವಿರುದ್ಧ ದೂರು ದಾಖಲಾಗಿದೆ.

ಗ್ರಾಮಸ್ಥರು ನಕಲಿ ಕಾರ್ಡ್ ಎಂದು ಮನವರಿಕೆ ಮಾಡಿದ ನಂತರ ಸಂಸ್ಥೆಯ ಮುಖ್ಯಸ್ಥರು ಹಾಗೂ ಕೆಲಸ ಮಾಡುವ ವ್ಯಕ್ತಿಗಳನ್ನು ಪ್ರಶ್ನಿಸಿದಾಗ ವಿಷಯ ಹೊರಬಂದಿದೆ.

ಸಂಸ್ಥೆಯ ಕೆಲವರು ಜನರನ್ನು ವಿಶ್ವಾಸಕ್ಕೆ ಪಡೆದು ಕೃತ್ಯವೆಸಗಿದ್ದು, ಕ್ರಮಕ್ಕೆ ಆಗ್ರಹಿಸಿ ದೂರು ನೀಡಲಾಗಿದೆ ಎಂದು ಪಿಡಿಒ ಮಂಗಳೇಶಪ್ಪ ನಾಯಕ ತಿಳಿಸಿದ್ದಾರೆ.

ದೇಶದಲ್ಲಿ ತಾಂಡವಾಡುತ್ತಿರುವ ನಿರುದ್ಯೋಗ ಸಮಸ್ಯೆ



ಕನಕಗಿರಿ: 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖಾಲಿಇರುವಹುದ್ದೆಗಳನ್ನುಭರ್ತಿಗೊಳಿಸುತ್ತಿಲ್ಲ. ಹೀಗಾಗಿ ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವಾಡುತ್ತಿದೆ' ಎಂದು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯಭವನದಲ್ಲಿಭಾರತಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಜಿಲ್ಲಾ ಸಮಿತಿ ಸೋಮವಾರ ಆಯೋಜಿಸಿದ್ದ 'ಜಿಲ್ಲಾ ಯುವ ಸಮಾವೇಶ' ಉದ್ಘಾಟಿಸಿ ಮಾತನಾಡಿ, 'ಸಂಘಟನೆಯು ಉದ್ಯೋಗದ ಹಕ್ಕಿಗಾಗಿ ಮತ್ತು 371 (ಜೆ) ಕಲಂ ಸಮರ್ಪಕ ಜಾರಿಗಾಗಿ ಹೋರಾಟ ನಡೆಸುತ್ತಿದೆ' ಎಂದು ಹೇಳಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಡಿವೈಎಫ್‌ಐ ಮುಂದಾಳು ಅಮರೇಶ ಕಡಗದ, ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಶಿವಕುಮಾರ ಈಚನಾಳ, ಪ್ರಮುಖರಾದ ಮಂಜುನಾಥ, ಸುಂಕಪ್ಪ ಗದಗ, ಗ್ಯಾನೇಶ್ ಕಡಗದ, ಅಡಿವೆಪ್ಪ ಕಂದಕೂರು, ಬಾಳಪ್ಪ ಹುಲಿಹೈದರ ಮಾತನಾಡಿದರು.

ದೇವದಾಸಿ ವಿಮೋಚನಾ ಸಂಘಟನೆಯ ರಾಜ್ಯಾಧ್ಯಕ್ಷೆ ಹುಲಿಗೆಮ್ಮ ಗಿಣಿಮೋತಿ, ಸಿಐಟಿಯು ತಾಲ್ಲೂಕು ಸಂಚಾಲಕ ಮಲ್ಲಪ್ಪ ಮ್ಯಾಗಡೆ, ಪರಶುರಾಮ ಹುಲಿಹೈದರ ಇದ್ದರು. ಉಮೇಶ ರಾಠೋಡ ಸ್ವಾಗತಿಸಿದರು. ವೀರೇಶ ಹಿರೇಮಠ ನಿರೂಪಿಸಿದರು. ತಿಮ್ಮಣ್ಣ ಹೊಮ್ಮಿನಾಳ ವಂದಿಸಿದರು.

ಮೆಣಸಗೇರಿ ಶಾಲೆಯಲ್ಲಿ ಉತ್ತಮ ಶಿಕ್ಷಕರಿಗೆ ಸನ್ಮಾನ



ಹನುಮಸಾಗರ: ತಾಲ್ಲೂಕಿನ ಮೆಣಸಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಮಂಜುನಾಥ ಹಿರೇಮಠ ಮತ್ತು ಹನುಮಂತ ವಡ್ಡರ ಅವರನ್ನು ಅಡವಿಭಾವಿ ಕ್ಲಸ್ಟರ್ ವತಿಯಿಂದ ಸನ್ಮಾನಿಸಲಾಯಿತು.

ಸಿಆರ್‌ಪಿ ಭರಮಪ್ಪ ಪರಸಾಪುರ ಮಾತನಾಡಿ, 'ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಕೊಡುಗೆ ನೀಡುವ ಮೂಲಕ ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದಿರುವುದು ಹೆಮ್ಮೆಯ ಸಂಗತಿ' ಎಂದು ಬಣ್ಣಿಸಿದರು.

ಮೆಣಸಗೇರಿ ಶಾಲೆಯಲ್ಲಿ ಅಡವಿಭಾವಿ ಹಾಗೂ ಚಳಗೇರಿ ಕ್ಲಸ್ಟರ್ ಮಟ್ಟದ ಕ್ರೀಡಾಕೂಟವನ್ನು ಯಶಸ್ವಿಯಾಗಿ ಆಯೋಜಿಸಲು ಸಹಕರಿಸಿದ ಗ್ರಾಮಸ್ಥರು, ಎಸ್‌ಡಿಎಂಸಿ ಸದಸ್ಯರು, ಸಿಆರ್‌ಪಿ ಹಾಗೂ ವಿವಿಧ ಶಾಲೆಗಳ ಮುಖ್ಯ ಶಿಕ್ಷಕರನ್ನು ಗೌರವಿಸಲಾಯಿತು.

ಮುಖ್ಯ ಶಿಕ್ಷಕ ನಾಗಪ್ಪ ಹಬ್ಬದ, ಅಡವಿಭಾವಿ ಕ್ಲಸ್ಟರ್ ವ್ಯಾಪ್ತಿಯ ಶಿಕ್ಷಕರು, ಎಸ್‌ಡಿಎಂಸಿ ಪದಾಧಿಕಾರಿಗಳು, ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು. ಭೂಷಣ್ ನಿರೂಪಿಸಿದರು.

ಮುಖ್ಯಶಿಕ್ಷಕ ಶೇಖರಪ್ಪ ಕುರಿ ಸ್ವಾಗತಿಸಿದರು. ಧರ್ಮರಾಜ ವಂದಿಸಿದರು.

ದಿನದ 24 ಗಂಟೆಯೂ ಕೃಷಿ ಸಾಲ ಸೌಲಭ್ಯ



ಕನಕಗಿರಿ: 'ಷೇರುದಾರರ ಸಹಕಾರದಿಂದ ಸಹಕಾರಿ ಸಂಘ ಲಾಭದಲ್ಲಿ ಮುನ್ನಡೆ ಸಾಧಿಸಿದೆ' ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಬಿ.ಕನಕಪ್ಪ ತಿಳಿಸಿದರು.

ಇಲ್ಲಿನ ಖಾಸಗಿ ಶಾಲೆಯ ಆವರಣದಲ್ಲಿ ಗುರುವಾರ ನಡೆದ ಸಂಘದ 46ನೇ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿ, 'ಸಂಘದಲ್ಲಿ ಈಗಾಗಲೆ ಶೇ 90ರಷ್ಟು ರೈತರು ಕೃಷಿ ಸಾಲ ಸೌಲಭ್ಯ ಪಡೆದುಕೊಂಡಿದ್ದಾರೆ. ಹೆಚ್ಚುವರಿ ಸಾಲ ಹಾಗೂ ಹೊಸ ಸಾಲ ನೀಡಲು 24ಗಂಟೆಯೂ ಆಡಳಿತ ಮಂಡಳಿ ಸಿದ್ಧವಿದೆ' ಎಂದರು.

ಸಕಾಲಕ್ಕೆ ಸಾಲ ಮರುಪಾವತಿಯಿಂದ ಈ ಸಾಲಿನಲ್ಲಿ 10.60 ಲಕ್ಷ ಲಾಭ ಗಳಿಸಿದೆ.

ಎಕರೆ ಭೂಮಿಗೆ 50 ಸಾವಿರ ಸಾಲ ನೀಡುವಂತೆ ಹಸಿರು ಸೇನೆ ಹಾಗೂ ರೈತ ಸಂಘಟನೆ ಜಿಲ್ಲಾಧ್ಯಕ್ಷ ಗಣೇಶರಡ್ಡಿ ಕೋರಿದರು.

ಇದಕ್ಕೆ ಕನಕಪ್ಪ, 'ಸರ್ಕಾರದ ಮಾರ್ಗಸೂಚಿ ಅನ್ವಯ ಸಾಲ ಸೌಲಭ್ಯ ನೀಡಲಾಗುತ್ತಿದೆ' ಎಂದು ಉತ್ತರಿಸಿದರು.

ಯಂಕಾರೆಡ್ಡಿ ಓಣಿಮನಿ ಮಾತನಾಡಿ, ಡಿಎಪಿ ಗೊಬ್ಬರ ನೀಡುವಂತೆ ಆಗ್ರಹಿಸಿದರು.


ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯಕುಮಾರ ತೆಗ್ಗಿನಮನಿ, ಸಂಘದ ಉಪಾಧ್ಯಕ್ಷ ಮಹಾಂತೇಶ ಕೊಡ್ಲಿ, ನಿರ್ದೇಶಕರಾದ ಶರಣಪ್ಪ ಕಲಕೇರಿ, ಕನಕರೆಡ್ಡಿ ಕೆರಿ, ರಾಘವೇಂದ್ರ ಚಿತ್ರಗಾರ, ಅಮರೇಶ ಭಾವಿಕಟ್ಟಿ, ದುರಗೇಶ ವಾಲೇಕಾರ, ಸಿಂದೂ ಬಲ್ಲಾಳ, ವನಜಾಕ್ಷಿ, ಶರಣಮ್ಮ, ಸಂಗಪ್ಪ ಹೂಗಾರ, ರಾಮಣ್ಣ ಬ್ಯಾಳಿ ಇದ್ದರು.

ಸಂಘದ ಷೇರುದಾರರಾದ ಉಮಾಕಾಂತ ದೇಸಾಯಿ,

ಶರಣಪ್ಪ ಗಟ್ಟೆಪ್ಪ ಸಜ್ಜನ್, ಚಿದಾನಂದ ಭಜಂತ್ರಿ ಅವರನ್ನು ಸನ್ಮಾನಿಸಲಾಯಿತು.

ಮಂಜುನಾಥರೆಡ್ಡಿ ಮಾದಿನಾಳ, ಶಕ್ಷಾವಲಿ ಬಿಳಿಕುದರಿ ನಿರ್ವಹಿಸಿದರು.

ಅಕ್ಕಪಡೆ ಗಸ್ತು ವಾಹನ ಸೇವೆ ಆರಂಭ ಹೆಣ್ಣು ಮಕ್ಕಳ ದೌರ್ಜನ್ಯ ತಡೆಗೆ



ಅಳವಂಡಿ: 'ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವುದು ಹಾಗೂ ದೂರುಗಳಿಗೆ ತ್ವರಿತವಾಗಿ ಸ್ಪಂದಿಸುವ ಉದ್ದೇಶದಿಂದ ಸರ್ಕಾರ 'ಅಕ್ಕಪಡೆ' ಗಸ್ತು ವಾಹನ ಸೇವೆ ಆರಂಭಿಸಿದೆ' ಎಂದು ಅಕ್ಕಪಡೆ ಮುಖ್ಯಸ್ಥೆ ಉಮಾ ಭಾರತಿ ಹಿರೇಮಠ ಹೇಳಿದರು.

ಇಲ್ಲಿನ ಬಸ್ ನಿಲ್ದಾಣದಲ್ಲಿ ಅಕ್ಕಪಡೆ ತಂಡದ ವತಿಯಿಂದ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಲ್ಯವಿವಾಹ, ಮಹಿಳೆಯರ ಮೇಲಿನ ದೌರ್ಜನ್ಯ, ಕಿರುಕುಳ ಸೇರಿದಂತೆ ಹೆಣ್ಣುಮಕ್ಕಳು ಹಾಗೂ ಮಹಿಳೆಯರು ಎದುರಿಸುವ ವಿವಿಧ ಸಮಸ್ಯೆಗಳನ್ನು ತಡೆಗಟ್ಟಲು ಅಕ್ಕಪಡೆ ಕಾರ್ಯನಿರ್ವಹಿಸಲಿದೆ. ಅಗತ್ಯ ಸಂದರ್ಭದಲ್ಲಿ ಸಂತ್ರಸ್ತರಿಗೆ ನೆರವು ನೀಡುವುದರ ಜತೆಗೆ, ಸಮಸ್ಯೆಗಳ ಕುರಿತು ಸಂಬಂಧಿಸಿದ ಇಲಾಖೆಗಳ ಗಮನಕ್ಕೆ ತಂದು ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು. ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಸುರಕ್ಷತೆ, ಬಾಲ್ಯವಿವಾಹತಡೆ, ದೌರ್ಜನ್ಯತಡೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಅಕ್ಕಪಡೆ ತಂಡದ ಅನಿತಾ, ಪಕೀರಮ್ಮ, ಶರಣಪ್ಪ ಹಾಗೂ ಇತರರು ಇದ್ದರು.

ನೀವೆಲ್ಲ ಹೇಗಿದ್ದೀರಿ ಅಂತ ಕೇಳಕ್ಕಾಗಲ್ಲ



ಕೊಪ್ಪಳ: 'ನೀವೆಲ್ಲ ಹೇಗಿದ್ದೀರಿ ಅಂತ ಕೇಳಕ್ಕಾಗಲ್ಲ. ಏಕೆಂದರೆ ದೇಶ ಸರಿ ಇಲ್ಲ. ಮೊದಲು ಎಸ್‌ಐಆರ್ ಬಂದಾಗ ನಾವೆಲ್ಲ ವಿರೋಧಿಸಿದ್ದೆವು. ಆಗ ಏನೋ ಬುದ್ಧಿಜೀವಿಗಳು ಮಾತನಾಡುತ್ತಾರೆ ಎಂದು ಜನ ಅಲಕ್ಷಿಸಿದ್ದರು. ಸಮಸ್ಯೆ, ನೋವು ಆಗುವವರೆಗೆ ಜನರಿಗೆ ಇದು ಅರ್ಥ ಆಗಲ್ಲ ಎಂದು ಅಂದೆ ನಾನು ಹೇಳಿದ್ದೆ. ಅವರಿಗದು ಈಗ ಅರ್ಥ ಆಗಿದೆ' ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಹೇಳಿದರು.

ನಗರದ ಶಾದಿಮಹಲ್‌ನಲ್ಲಿ ಗುರುವಾರ ನಾಗರಿಕ ಸಂಘಟನೆಗಳ ಒಕ್ಕೂಟ ಹಾಗೂ ಜಾತ್ಯತೀತ ಮುಖಂಡರೊಂದಿಗೆ ನಡೆದ ಎಸ್‌ಐಆರ್ ಪರಿಶೋಧ ಹಾಗೂ ಪ್ರತಿರೋಧ ಪ್ರವಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಕಷ್ಟು ವಿರೋಧದ ನಡುವೆಯೂ ಎಸ್‌ಐಆರ್ ಮೂಲಕ ಕರ್ನಾಟಕದಲ್ಲಿ 1.8 ಕೋಟಿ ಜನರನ್ನು ತೆಗೆದು ಹಾಕಲಾಗಿದೆ. ಇದರಲ್ಲಿ 43 ಲಕ್ಷ ಜನ ಮ್ಯಾಪ್ ಆಗಿಲ್ಲ ಎಂದು ಚುನಾವಣಾ ಆಯೋಗವೇ ಹೇಳುತ್ತಿದೆ. ಮತದಾರರ ಪಟ್ಟಿಯಲ್ಲಿ ಪ್ರಭಾವಿಗಳು, ದೊಡ್ಡ ಮನುಷ್ಯರು ಹೆಸರು ಬಿಟ್ಟು ಹೋಗಿದ್ದರೆ ಈ ಚುನಾವಣೆ ಆಯೋಗದವರು ಅವರ ಮನೆಗೇ ತೆರಳಿ ಸರಿಪಡಿಸುತ್ತಾರಂತೆ. ಆದರೆ, ಜನಸಾಮಾನ್ಯರು ಮಾತ್ರ ತಾವೇ ಓಡಾಡಿ ತಮ್ಮ ಗುರುತನ್ನು ರುಜುವಾತುಪಡಿಸಿಕೊಳ್ಳಬೇಕು.

ಹಾಗಾದರೆ ಅವರ ದೃಷ್ಟಿಯಲ್ಲಿ ನಾವೆಲ್ಲ ಯಾರು?' ಎಂದು ಪ್ರಶ್ನಿಸಿದರು.

ಅಂಬೇಡ್ಕರ್ ಅವರ ಸಂವಿಧಾನದ ಪ್ರಕಾರ ನೀನು ದೊಡ್ಡವನೋ ಚಿಕ್ಕವನೋ. ಮತದಾನದ ವಿಷಯದಲ್ಲಿ ಮಾತ್ರ ಎಲ್ಲರೂ ಸಮಾನರೇ.

ಒಂದು ಸರ್ಕಾರವನ್ನು ಏರಿಸುವ ಅಥವಾ ಇಳಿಸುವ ಶಕ್ತಿ ಪ್ರಜೆಗಳಿಗೆ ಮಾತ್ರ ಇರೋದು. ಈಗ ಎಸ್‌ಐಆರ್ ಮೂಲಕ ಅದನ್ನೇ ಕಿತ್ತುಕೊಂಡರೆ ನಾವು ಸುಮ್ಮನಿರುತ್ತೇವೆಯೇ? ಬೀದಿಗಿಳಿದು ಹೋರಾಟ ಮಾಡಿ ಗೆಲುವು ಪಡೆಯದೇ ಬಿಡುವುದಿಲ್ಲ' ಎಂದರು.

ಚುನಾವಣಾ ಆಯೋಗದ ಭೇಟಿಯ ವೇಳೆ ಹೊಸದಾಗಿ 11 ಲಕ್ಷ ಮತದಾರರು ಸೇರ್ಪಡಿಕೊಂಡಿದ್ದಾರೆ ಎಂದು ರಾಜ್ಯ ಆಯೋಗದ ಅಧ್ಯಕ್ಷ ಅನ್ಬುಕುಮಾರ್ ಹೇಳಿದ್ದರು. ಆಗ ನಾವು ಆ ಹೊಸ ಮತದಾರರ ಪಟ್ಟಿ ನೀಡುವಂತೆ ಕೋರಿದ್ದೇವು. ಆದರೆ, ಈವರೆಗೆ ಅವರಿಂದ ಯಾವುದೇ ಉತ್ತರ ಬಂದಿಲ್ಲ' ಎಂದು ಹೇಳಿದರು.

ಮತದಾರರ ಪಟ್ಟಿಯಿಂದ ಹೆಸರು ಬಿಟ್ಟು ಹೋಗಿರುವವರಿಂದ ಮಾಹಿತಿಗಳನ್ನು ಇಂತಹ ಕಾರ್ಯಕ್ರಮಗಳ ಮೂಲಕ ಸೆ.30ರವರೆಗೆ ಶೇಖರಣೆ ಮಾಡಲಾಗುತ್ತಿದೆ. ಮುಖ್ಯಮಂತ್ರಿಗೆ ನಮ್ಮ ಹೋರಾಟದಲ್ಲಿ ಭಾಗಿಯಾಗುವಂತೆ ಮನವಿ ಮಾಡುವುದು ಹಾಗೂ ಇಡೀ ಕರ್ನಾಟಕದಲ್ಲಿ ಸೋಷಿಯಲ್ ಆಡಿಟ್ ಮಾಡುವಂತೆ ಒತ್ತಾಯಿಸಲಾಗುತ್ತದೆ. ಅಕ್ಟೋಬರ್ 15ರಂದು ದೆಹಲಿಯ ಜಂತರ್‌ಮಂತರ್‌ನಲ್ಲಿ ಎಲ್ಲ ಸಂಸತ್ರಸ್ತರು ಸೇರಿ ಹೋರಾಟ ಮಾಡಲಿದ್ದೇವೆ' ಎಂದು ವಿವರಿಸಿದರು.

ರೈತ ಸಂಘದ ಅಧ್ಯಕ್ಷ ವೀರಸಂಗಯ್ಯ, ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, ಹೋರಾಟಗಾರ ಡಿ.ಎಚ್.ಪೂಜಾರ್ ಮಾತನಾಡಿದರು. ಮಂಜುನಾಥ ಗೊಂಡಬಾಳ ನಿರೂಪಿಸಿ, ವಂದಿಸಿದರು.

ಈ ಸಂದರ್ಭದಲ್ಲಿ ಕೆ.ಬಿ.ಗೋನಾಳ, ಬಸವರಾಜ ಶೀಲವಂತರ, ಎಸ್.ಎ.ಗಫಾರ್, ಶಾಹೀದ್ ಹುಸೇನ್ ತಹಶೀಲ್ದಾರ್, ಅಲಿಮುದ್ದೀನ್, ಸೈಯದ್ ಹಿದಾಯತ್ ಅಲಿ, ಜ್ಯೋತಿ ಗೊಂಡಬಾಳ, ಆದಿಲ್ ಪಟೇಲ್, ಸಲಿಮಾ ಜಾನ್, ದುರುಗೇಶ ಬರಗೂರು

ಬೇವಿನಹಾಳ ಗ್ರಾಮದಲ್ಲಿ ಕನಕಗಿರಿ ಅರಸರ ಕಾಲದ ಶಾಸನ ಪತ್ತೆ



ಕಾರಟಗಿ: ತಾಲ್ಲೂಕಿನ ಬೇವಿನಹಾಳ ಗ್ರಾಮದಲ್ಲಿ ಕನಕಗಿರಿ ಅರಸರ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನ ಪತ್ತೆಯಾಗಿದೆ. ಪಟ್ಟಣದ ಸಿ.ಎಂ.ಎನ್. ಕಾಲೇಜಿನ ಉಪನ್ಯಾಸಕ ಹನುಮಂತಪ್ಪ ಚಂದಲಾಪುರ ಮತ್ತು ಅವರ ಆಸಕ್ತ ಗೆಳೆಯರ ತಂಡ ಶಾಸನ ಸಂಶೋಧಿಸಿದ್ದಾರೆ.

ಬೇವಿನಹಾಳ ಗ್ರಾಮಕ್ಕೆ ಹೊಂದಿಕೊಂಡಂತೆ ದಕ್ಷಿಣ ದಿಕ್ಕಿನಲ್ಲಿರುವ ಮಠಂಪೊದೆ ಎಂದು ಕರೆಯಲ್ಪಡುವ ಕನಕಗಿರಿ ಮಠವಿದ್ದ ಸ್ಥಳದಲ್ಲಿ ಶಾಸನ ಪತ್ತೆಯಾಗಿದೆ. ಶಾಸನವು ಕೆಂಪುಕಣ ಶಿಲೆಯಲ್ಲಿದ್ದು, ಸುಮಾರು ನಾಲ್ಕು ಅಡಿ ಎತ್ತರ, ಮೂರು ಅಡಿ ಅಗಲವಿದ್ದು, ಕನ್ನಡ ಲಿಪಿಯನ್ನು ಹೊಂದಿದೆ.

ಶಾಸನ ಅಧ್ಯಯನ ಮಾಡಿದ ಇತಿಹಾಸ ಸಂಶೋಧಕ ಚನ್ನಬಸಪ್ಪ ಮಲ್ಕಂದಿನ್ನಿ, 'ಇದು ಕನಕಗಿರಿ ರಾಜರ ಆಡಳಿತಕ್ಕೆ ಸೇರಿದ ಕ್ರಿ.ಶ1701ಕ್ಕೆ ಸೇರಿರಬಹುದಾದ ದಾನ ಶಾಸನವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಜೇಶ್ರೀ ಜನ್ನಮ ಶಿವಾಯದೇವರು ಎಂಬಾತನು ಈ ಶಿಲಾಶಾಸನವನ್ನು ಬರೆಸಿದ್ದು, ರವುಡಕುಂದಾ ಸೀಮೆಯ ನಾಡಗೌಡರು, ಈ ಸ್ಥಳದ ಗೌಡರು, ಭೋಗರು (ವರ್ತಕರು) ಈ ಸ್ಥಳದಲ್ಲಿ ಮಠ ಸ್ಥಾಪನೆ ಮಾಡಿದ್ದರು, ಅರಮನೆಯವರು ಪೂಜೆ ಸಲ್ಲಿಸುವ ಪ್ರಸ್ತಾಪವಿದೆ' ಎಂದು ವಿಶ್ಲೇಷಿಸಿದರು.

ಈ ದೇಶದ, ಕಾಲಕಾಲದ ಇತಿಹಾಸವನ್ನು ನಿಖರವಾಗಿ ತಿಳಿಯಲು ಇಂತಹ ಶಾಸನಗಳು ಅತ್ಯಂತ ವಿಶ್ವಾಸಾರ್ಹ ಮತ್ತು ಶಾಶ್ವತವಾದ ಲಿಖಿತ ಆಕರಗಳಾಗಿವೆ. ಕಾರಟಗಿಯಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವ ಈ ಹೊತ್ತಿನಲ್ಲಿ ಕಾರಟಗಿ ಇತಿಹಾಸಕ್ಕೆ ಸಂಬಂಧಿಸಿದ ಈ ಶಾಸನ ಹೊಸ ಬೆಳಕು ಚೆಲ್ಲಲಿದೆ.

– ರಾಘವೇಂದ್ರ ಕಂಠಿ, ಮುಖ್ಯಶಿಕ್ಷಕ ಸರ್ಕಾರಿ ಪ್ರೌಢಶಾಲೆ, ಯರಡೋಣ

ಹುಂಡಿ ಎಣಿಕೆ:14.94 ಲಕ್ಷ ಸಂಗ್ರಹ




ಗಂಗಾವತಿ: ತಾಲ್ಲೂಕಿನ ಚಿಕ್ಕರಾಂಪುರ ಸಮೀಪದ ಧಾರ್ಮಿಕ ಪುಣ್ಯಕ್ಷೇತ್ರ ಅಂಜನಾದ್ರಿ ಬೆಟ್ಟದಲ್ಲಿ ಮಂಗಳವಾರ ಹುಂಡಿ ಹಣ ಎಣಿಕೆ ಮಾಡಲಾಯಿತು. ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಹುಂಡಿ ಹಣ ಎಣಿಕೆ ಮಾಡಲಾಗಿದೆ. ಇದರಲ್ಲಿ 14,94,200 (ಸೆ.2 ರಿಂದ 22ರವರೆಗೆ) ಹಣ ಸಂಗ್ರಹವಾಗಿದೆ.

ಈ ಹುಂಡಿ ಎಣಿಕೆ ವೇಳೆಯಲ್ಲಿ ಯುರೋ, ನೇಪಾಳ ದೇಶದ ನೋಟುಗಳು ಸಂಗ್ರಹವಾಗಿವೆ. ಇನ್ನೂ ಕಳೆದ ಬಾರಿ (ಸೆ. 2)ರಂದು ಹುಂಡಿ ಎಣಿಕೆ ವೇಳೆಯಲ್ಲಿ 13,98,605 ಲಕ್ಷ ಸಂಗ್ರಹವಾಗಿತ್ತು. ಎಣಿಕೆ ಕಾರ್ಯವು ಸಂಪೂರ್ಣ ಪೊಲೀಸ್ ಬಂದೋಬಸ್ತ್ ಹಾಗೂ ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ನಡೆದಿತ್ತು.

ಗ್ರೇಡ್2 ತಹಶೀಲ್ದಾರ್ ವೆಂಕಟೇಶ ಆಶ್ರೀತ್, ಶಿರಸ್ತೇದಾರರಾದ ಕೃಷ್ಣವೇಣಿ, ಆಹಾರ ನಿರೀಕ್ಷಕ ಶೇಖರಪ್ಪ, ಕಂದಾಯ ನಿರೀಕ್ಷಕ ಮಹೇಶ ದಲಾಲ್, ಗ್ರಾಮಾಡಳಿತ ಅಧಿಕಾರಿ ಮಂಜುನಾಥ, ನಾಗರತ್ನ, ಮಂಜುನಾಥ, ಸೂರ್ಯಕಾಂತ, ಸುಧಾ, ಕವಿತಾ, ಸುಪ್ರೀಯಾ, ಶಿವಕುಮಾರ, ನವಾಜ್, ಶರಣಪ್ಪ, ಅಮರೇಶ, ಪಿಕೆಜಿಬಿ ಬ್ಯಾಂಕ್ ವ್ಯವಸ್ಥಾಪಕ ನವೀನ ಕುಮಾರ, ದೇವಸ್ಥಾನದ ವ್ಯವಸ್ಥಾಪಕ ವೆಂಕಟೇಶ ಉಪಸ್ಥಿತರಿದ್ದರು.

ಗಂಗಾವತಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಡಿಸಿಎಂಗೆ ಮನವಿ



ಗಂಗಾವತಿ: ನಗರದ ಹಳೆಯ ಪ್ರವಾಸಿ ಮಂದಿರದ ಬಳಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಒತ್ತಾಯಿಸಿ ಪರಿಷತ್ ಮಾಜಿ ಸದಸ್ಯ ಎಚ್.ಆರ್.ಶ್ರೀನಾಥ ಅವರು ಡಿಸಿಎಂ ಡಾ.ಜಿ.ಪರಮೇಶ್ವರ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಗಂಗಾವತಿ ನಗರ ಭಾಗದಲ್ಲಿ ಮಿನಿ ವಿಧಾನಸೌಧ ನಿರ್ಮಿಸುವುದರಿಂದ ಎಲ್ಲರಿಗೂ ಅನುಕೂಲವಾಗಲಿದೆ. ಇನ್ನೂ ಕೊಪ್ಪಳ ಜಿಲ್ಲೆಯಲ್ಲಿ ಸಮರ್ಪಕ ಮಳೆಯಾಗದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಜಿಲ್ಲೆಯನ್ನು ಕೂಡಲೇ ಬರ ಪೀಡಿತ ಪ್ರದೇಶವೆಂದು ಘೋಷಿಸಬೇಕು' ಎಂದು ಕೋರಿದರು. ಡಿಸಿಎಂ ಡಾ.ಜಿ.ಪರಮೇಶ್ವರ ಅವರು ಮನವಿಗೆ ಸ್ಪಂದಿಸಿ, 'ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಬಿ.ಕೆ.ಹರಿಪ್ರಸಾದ್ ಭೇಟಿ: ಎಚ್.ಆರ್.ಶ್ರೀನಾಥ ಅವರು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರನ್ನು ಬೆಂಗಳೂರಿನ ಗೃಹ ಕಚೇರಿಯಲ್ಲಿ ಭೇಟಿ ಮಾಡಿ ಕೊಪ್ಪಳ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಬಲಪಡಿಸುವುದು ಸೇರಿದಂತೆ ವಿವಿಧ ವಿಚಾರಗಳ ಕುರಿತು ಚರ್ಚೆ ನಡೆಸಿದರು. ಚರ್ಚೆಗೆ ಸ್ಪಂದಿಸಿದ ಬಿ.ಕೆ.ಹರಿಪ್ರಸಾದ್ ಅವರು, ಇನ್ನೂ ಕೆಲವೇ ದಿನಗಳಲ್ಲಿ ಕೊಪ್ಪಳ ಜಿಲ್ಲೆಗೆ ಭೇಟಿ ನೀಡಿ ಪಕ್ಷದ ಸಂಘಟನೆ ಕುರಿತು ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು.

ಕೊಪ್ಪಳದಲ್ಲಿ ಹೆಡ್‌ಲೈಟ್ ಕೈಕೊಟ್ಟಿದ್ದರಿಂದ ಚಾಲಕ ಪರದಾಟ

ಕೊಪ್ಪಳ: ತಾಲ್ಲೂಕಿನ ಶಹಾಪುರ ಗ್ರಾಮಕ್ಕೆ ತೆರಳುತ್ತಿದ್ದ ಬಸ್‌ನ ಹೆಡ್‌ಲೈನ್ ಬುಧವಾರ ಕೈ–ಕೊಟ್ಟಿದ್ದರಿಂದ ಚಾಲಕ ಪರದಾಡಬೇಕಾಯಿತು. ಮಳೆ ಬರುತ್ತಿದ್ದದ್ದು ಒಂದೆಡೆಯಾದರೆ ಬೆಳಕಿನ ವ್ಯವಸ್ಥೆ ಇಲ್ಲದಿರುವುದು ಮತ್ತೊಂದು ಸಮಸ್ಯೆಗೆ ಕಾರಣವಾಯಿತು. ಸ್ವಲ್ಪ ದೂರ ಮೊಬೈಲ್ ಫೋನ್ ಬೆಳಕಿನಲ್ಲಿ ಬಸ್ ಚಲಾಯಿಸಿಕೊಂಡು ರಸ್ತೆ ಬದಿಗೆ ಬಂದು ಬಳಿಕ ಹೆಡ್‌ಲೈಟ್ ಸರಿಪಡಿಸಿಕೊಂಡಿದ್ದಾರೆ. ಘಟನೆ ಬಗ್ಗೆ ಮಾಹಿತಿ ಒದಗಿಸಿದ ಬಸ್‌ನ ಸಿಬ್ಬಂದಿ 'ರಸ್ತೆ ಮಧ್ಯದಲ್ಲಿದ್ದಾಗ ಬಸ್‌ನ ಹೆಡ್‌ಲೈಟ್‌ಗಳು ತಂತಿ ತುಂಡಾಗಿ ಬಂದ್ ಆದವು. ಬಸ್ ರಸ್ತೆ ಬದಿಗೆ ತಂದು ಹೆಡ್‌ಲೈನ್ ಸರಿಪಡಿಸಿಕೊಂಡೇ ಮುಂದಿನ ಸಂಚಾರ ಆರಂಭಿಸಿದೆವು. ಹೆಡ್‌ಲೈನ್ ಇಲ್ಲದೆ ಬಸ್ ಸಂಚಾರ ಮಾಡಿಲ್ಲ' ಎಂದು ಹೇಳಿದರು.

ಜಿಲ್ಲಾಧಿಕಾರಿಗಳಿಂದ ಬರ ಪರಿಸ್ಥಿತಿಯ ಅಧ್ಯಯನ ಹಾಗೂ ಪರಿಶೀಲನೆ



ಕುಕನೂರು: ಬರ ಪರಿಸ್ಥಿತಿಯ ಅಧ್ಯಯನ ಹಾಗೂ ಗ್ರಾಮಗಳಲ್ಲಿನ ವಾಸ್ತವ ಪರಿಸ್ಥಿತಿ ಪರಿಶೀಲಿಸುವ ಉದ್ದೇಶದಿಂದ ಜಿಲ್ಲಾಧಿಕಾರಿ ಸುರೇಶ್ ಬಿ.ಇಟ್ನಾಳ್ ಅವರು ತಾಲ್ಲೂಕಿನ ಇಟಗಿ ಹಾಗೂ ಬನ್ನಿಕೊಪ್ಪ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮಗಳಲ್ಲಿನ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಮತ್ತು ನೀರಿನ ಲಭ್ಯತೆ, ಕೃಷಿ ಪರಿಸ್ಥಿತಿ ಹಾಗೂ ಉದ್ಯೋಗದ ಅಗತ್ಯತೆ ಸೇರಿದಂತೆ ಬರ ಪರಿಸ್ಥಿತಿಗೆ ಸಂಬಂಧಿಸಿದ ವಿಷಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಗ್ರಾಮಸ್ಥರೊಂದಿಗೆ ಚರ್ಚಿಸಿ, ಬರ ಪರಿಸ್ಥಿತಿಯಿಂದ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಸಂಗ್ರಹಿಸಿದರು. ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿ.ಪಂ ಸಿಇಒ ವರ್ಣಿತ್ ನೇಗಿ, ತಹಶೀಲ್ದಾರ್ ಬಸವರಾಜ್ ಬಣ್ಣಿ ಶಿರೂರು, ತಾ.ಪಂ ಇಒ ಬೆಟದೇಶ್ ಮಾಳೇಕೊಪ್ಪ ಇದ್ದರು.

ಗೋಕಾಕದಲ್ಲಿ ಜೂಜಾಟದಲ್ಲಿ ನಿರತರಾಗಿದ್ದ 9 ಜನರ ಬಂಧನ, 18, 110 ಜಪ್ತಿ

ಗೋಕಾಕ: ತಾಲ್ಲೂಕಿನ ಕೊಣ್ಣೂರ ಪಟ್ಟಣ ವ್ಯಾಪ್ತಿಯ ತಪಶಿ ಮಡ್ಡಿ ಹತ್ತಿರ ಜೂಜಾಟದಲ್ಲಿ ನಿರತ ಗುಂಪಿನ ಮೇಲೆ ಹಠಾತ್ ದಾಳಿ ನಡೆಸಿದ ಗೋಕಾಕ ಗ್ರಾಮೀಣ ಠಾಣೆ ಪೊಲೀಸರು 9 ಜನರನ್ನು ಬಂಧಿಸಿ ಅವರಿಂದ ನಗದು 18,110 ಜಪ್ತಿ ಮಾಡಿದ ಘಟನೆ ಬುಧವಾರ ರಾತ್ರಿ ನಡೆದಿದೆ.

ಬಂಧಿತರನ್ನು ನಗರದ ಪರಶುರಾಮ ಹನಮಂತಪ್ಪ ದ್ಯಾಮನ್ನವರ, ಪ್ರವೀಣ ಸತ್ತೆವ್ವಕಳ್ಳೀಮನಿ, ಗೋಪಾಲ ಜಾನಪ್ಪ ಕರೆಮ್ಮನವರ, ಬಾಳೇಶ ಮಾರುತಿ ಕಾಗಿ, ಅಶ್ಫಾಕ ಮೆಹಬೂಬ ಖಾಜಿ, ನವೀನ ಸುಭಾಷ ಬೀಳಗಿ, ಹನಮಂತ ಅಪ್ಪಯ್ಯ ಪೂಜೇರಿ, ವಿನಾಯಕ ಬಸವರಾಜ ಹೂಲಿ ಮತ್ತು ಸಾಗರ ರಾಮಚಂದ್ರ ಗಾಣಿಗೇರ ಎಂದು ಗುರ್ತಿಸಲಾಗಿದೆ.

ಆರೋಪಿತರ ವಿರುದ್ಧ ಸಬ್ ಇನ್‌ಸ್ಪೆಕ್ಟರ್ ಕೆ.ಬಿ.ವಾಲೀಕಾರ ಅವರು ಗೋಕಾಕ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಜೂಜಾಟ:ತಾಲ್ಲೂಕಿನಕೈತನಾಳಗ್ರಾಮದಹಳ್ಳದಹತ್ತಿರ ಕೈತನಾಳ-ತವಗ ರಸ್ತೆಯ ಪಕ್ಕ ಸಾರ್ವಜನಿಕರನ್ನು ಮಜರಾ ಓಸಿ ಜೂಜಾಟದಲ್ಲಿ ತೊಡಗುವಂತೆ ಪ್ರೇರೇಪಿಸುತ್ತಿದ್ದವನನ್ನು ?260 ಸಮೇತ ವಶಕ್ಕೆ ಪಡೆದ ಘಟನೆ ಮಂಗಳವಾರ ಮಧ್ಯಾಹ್ನ ನಡೆದಿದೆ.

ಬಂಧಿತನನ್ನು ಅದೇ ಕೈತನಾಳ ಗ್ರಾಮದ ನಿಂಗಪ್ಪ ಸಿದ್ದಪ್ಪಾ ಖನ್ನವ್ವನಪೂಜೇರಿ ಎಂದು ಗುರ್ತಿಸಲಾಗಿದೆ.

ಆರೋಪಿತನ ವಿರುದ್ಧ ಸಬ್ ಇನ್‌ಸ್ಪೆಕ್ಟರ್ ಕೆ.ಬಿ.ವಾಲೀಕಾರ ಅವರು ಗೋಕಾಕ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಜಾಲತಾಣಗಳಿಂದ ಮೋಸ: ಎಚ್ಚರಿಕೆ ವಹಿಸಿ



ಹುಕ್ಕೇರಿ: ಸಾಮಾಜಿಕ ಜಾಲತಾಣಗಳ ಪ್ರಭಾವಕ್ಕೆ ಒಳಪಟ್ಟು ವಿದ್ಯಾರ್ಥಿನಿಯರು ಲೈಂಗಿಕ ಅಪರಾಧಕ್ಕೆ ಒಳಗಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಜಾಲತಾಣಗಳ ಮೋಸ ತಡೆಗಟ್ಟಲು ಶಾಲಾ ಕಾಲೇಜುಗಳಲ್ಲಿ ತಿಳುವಳಿಕೆ ನೀಡುವುದು ಕಡ್ಡಾಯವಾಗಬೇಕು ಎಂದು ಹುಕ್ಕೇರಿ ಠಾಣೆಯ ಮಹಿಳಾ ಪಿಎಸ್‌ಐ ಗೀತಾ ಗೌಡ ಅಭಿಮತ ವ್ಯಕ್ತಪಡಿಸಿದರು.

ತಾಲ್ಲೂಕಿನ ಸಂಕೇಶ್ವರದ ಎಸ್.ಡಿ.ವಿ.ಎಸ್ ಸಂಘದ ಎಸ್.ಎಸ್.ಆರ್ಟ್ಸ್ ಮತ್ತು ಟಿ.ಪಿ ಸೈನ್ಸ್ ಇನ್ಸ್ಟಿಟ್ಯೂಟ್ ಹಾಗೂ ಎಲ್.ಕೆ. ಖೋತ ವಾಣಿಜ್ಯ ಮಹಾವಿದ್ಯಾಲಯಗಳಐಕ್ಯೂಎಸಿ ಅಡಿಯಲ್ಲಿಲೈಂಗಿಕ ಕಿರುಕುಳ ತಡೆ, ರಾಗಿಂಗ್ ವಿರೋಧಿಮತ್ತುಕುಂದು ಕೊರತೆ ಪರಿಹಾರ ಘಟಕದಿಂದ ವಿದ್ಯಾರ್ಥಿಗಳಿಗೆ ಬುಧವಾರ ಏರ್ಡಿಸಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉಳ್ಳಾಗಡ್ಡಿ ಖಾನಾಪುರ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಅಮೃಭುನಿ ಕಂಕಣವಾಡಿ ಮಾತನಾಡಿ, ಮಹಿಳೆಯರ ದೈಹಿಕ ಮತ್ತು ಮಾನಸಿಕ ಸುರಕ್ಷತೆಗೆ ಸಂಬಂಧಿಸಿದಂತೆ ಅತ್ಯಮೂಲ್ಯ ಸಲಹೆ ನೀಡಿದರು.

ವಕೀಲೆ ಐಶ್ವರ್ಯ ನೀಲಕರಿ ಮಹಿಳಾ ಸುರಕ್ಷಾ ಕಾನೂನು ನೆರವು ಕುರಿತು ಮಾತನಾಡಿ, ಪ್ರತಿಯೊಂದು ಸಂಸ್ಥೆಯಲ್ಲಿ ಆಂತರಿಕ ದೂರುಗಳ ಸಮಿತಿ ಇರುವುದು ಅಗತ್ಯ. ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಲೈಂಗಿಕ ಕಿರುಕುಳ ಸೇರಿ ಮಹಿಳೆಯರ ಮೇಲೆ ಎಸಗುವ ದೌರ್ಜನ್ಯಕ್ಕೆ ಶಿಕ್ಷೆಯ ಪ್ರಮಾಣ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ವಕೀಲ, ಸ್ಥಾನಿಕ ನಿಯಂತ್ರಣ ಸಮಿತಿ ಅಧ್ಯಕ್ಷ ಆರ್. ಬಿ ಪಾಟೀಲ ಕಾನೂನಿನ ನೆರವು ಮತ್ತು ಮಹಿಳಾ ಸಬಲೀಕರಣ ಕುರಿತು ಮಾತನಾಡಿದರು.

ಸಂಘದ ಕಾರ್ಯದರ್ಶಿ ಜಿ ಸಿ ಕೋಟಗಿ, ಆಡಳಿತಾಧಿಕಾರಿ ಡಾ ಬಿ.ಎ.ಪೂಜಾರಿ, ಡಾ.ಪಿ ಎಸ್ ಮನ್ನೋಳಿ, ಪ್ರಾಚಾರ್ಯರಾದ ಡಾ. ಡಿ.ಎಸ್ ಕಾಂಬಳೆ, ಡಾ.ಪಿ.ವಿ.ಗಾಡವಿ ವೇದಿಕೆ ಮೇಲಿದ್ದರು.

ಐಕ್ಯೂಎಸಿ ಸಂಯೋಜಕರಾದ ಎಂ ಆರ್ ಪಾಟೀಲ ಮತ್ತು ಡಾ. ಡಿ.ಡಿ ಕುಲಕರ್ಣಿ ಸೇರಿ ನೂರಾರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಸಂಯೋಜಿವಿಡಾ.ವಿಜಯಲಕ್ಷ್ಮೀ ನಾಗನೂರಿ ಪ್ರಾಸ್ತಾವಿಸಿ ಸ್ವಾಗತಿಸಿದರು. ಡಾ.ಎಂ. ವೈ.ಹಿರೇಮಠ ನಿರೂಪಿಸಿದರು. ಪ್ರೊ.ಎಂ.ಜಿ.ಖಡೇದ ವಂದಿಸಿದರು.

ಸೋಮೇಶ್ವರ ಸಕ್ಕರೆ ಕಾರ್ಖಾನೆ 4 ಲಕ್ಷ ಟನ್ ಕಬ್ಬು ನುರಿಸುವ ಗುರಿ



ಬೈಲಹೊಂಗಲ: 'ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯ 2026-2027 ನೇ ಸಾಲಿನ ಕಬ್ಬು ಅರೆಯುವ ಹಂಗಾಮವನ್ನು ನಿಗದಿತ ಅವಧಿಯಲ್ಲಿ ಪ್ರಾರಂಭಿಸಿ ಹಂಗಾಮಿನಲ್ಲಿ ಕನಿಷ್ಠ 3.50 ರಿಂದ 4 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರಿದು ಅಂ-ದಾಜು ಸರಾಸರಿ ಸಕ್ಕರೆ ಇಳುವರಿ ಪ್ರಮಾಣ ಶೇ.11.50 ರಂತೆ ಸಕ್ಕರೆ ಉತ್ಪಾದಿಸುವ ಗುರಿ ಇಟ್ಟುಕೊಳ್ಳಲಾಗಿದೆ' ಎಂದು ಕಾರ್ಖಾನೆ ಅಧ್ಯಕ್ಷ ಬಸವರಾಜ ಬಾಳೇಕುಂದರಗಿ ಹೇಳಿದರು.

ತಾಲ್ಲೂಕಿನ ಸಿದ್ದಸಮುದ್ರ ಗ್ರಾಮ ಸಮೀಪದ ಸೋಮೇಶ್ವರ ಸಹಕಾರಿ ಸಕ್ಕ-ರೆ ಕಾರ್ಖಾನೆಯಲ್ಲಿ ಗುರುವಾರ ನಡೆದ 2025?26ನೇಸಾಲಿನವಾರ್ಷಿಕಮಹಾಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು.


ಹಂಗಾಮಿನ ಪೂರ್ವ ತಯಾರಿಗಾಗಿ ಯಂತ್ರೋಪಕರಣಗಳ ದುರಸ್ತಿ, ಓವರ್ ಹಾಲಿಂಗ್, ಅಗತ್ಯ ಸಾಮಗ್ರಿಗಳ ವ್ಯವಸ್ಥೆ ಮಾಡಲಾಗುತ್ತಿದೆ. ಕಾರ್ಖಾನೆಯಿಂದ 100 ಕೆ ಎಲ್.ಪಿ.ಡಿ ಇಥನಾಲ್ ಘಟಕ ಸ್ಥಾಪನೆ, ಕಬ್ಬು ಅರಿಯುವ ಸಾಮರ್ಥ್ಯವನ್ನು 4500 ಟಿಸಿಡಿ ಸಾಮರ್ಥ್ಯಕ್ಕೆ ಕೋ ಜನರೇಷನ್ ಘಟಕದ ಸಾಮರ್ಥ್ಯವನ್ನು 12 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ವಿಸ್ತರಣೆ ಮಾಡಲಾಗುವುದು' ಎಂದರು.

ಕಾರ್ಖಾನೆ ಉಪಾಧ್ಯಕ್ಷ ರಾಜು ಕುಡಸೋಮಣ್ಣವರ, ನಿರ್ದೇಶಕರಾದ ಉಮೇಶ ಬಾಳಿ, ರಾಚಪ್ಪ ಮಟ್ಟಿ, ಪ್ರಕಾಶ ಮೂಗಬಸವ, ಮಹಾಂತೇಶ ಮತ್ತಿಕೊಪ್ಪ, ಕಾರ್ತಿಕ ಮಲ್ಲೂರ, ಅಶೋಕ ಯರಗೊಪ್ಪ, ಅನಿತಾ ಮೆಟಗುಡ್ಡ, ಕಸ್ತೂರಿ ಸೋಮನಟ್ಟಿ, ಅದೃಶ್ಯಪ್ಪ ಕೊಟಬಾಗಿ, ಅಶೋಕ ಬಾಳೇಕುಂದರಗಿ, ರಾಮಚಂದ್ರ ಕಕ್ಕಯ್ಯನವರ, ಸಣ್ಣಭೀಮಶೆಪ್ಪಅಂಬಡಗಟ್ಟಿ, ಶ್ರೀಶೈಲ ಶರಣಪ್ಪನವರ, ಅಪೇಕ್ಷ ಬ್ಯಾಂಕ್ ಪ್ರತಿನಿಧಿ ಶಿವಾನಂದ ದೂತಗುಂಡಿ, ಬಿಡಿಸಿಸ ಬ್ಯಾಂಕ್ ಪ್ರತಿನಿಧಿ ಬಸವರಾಜ ಬೋಳಗೌಡರ, ಸಹಮತ ನಿರ್ದೇಶಕರಾದ ಶ್ರೀಶೈಲ ಮೂಗಬಸವ, ಮಹಾಂತೇಶ ತುರಮರಿ, ಸಿದ್ಧನಗೌಡ ಪಾಟೀಲ ವೇದಿಕೆ ಮೇಲೆ ಇದ್ದರು.

ಕಾರ್ಖಾನೆವ್ಯವಸ್ಥಾಪಕನಿರ್ದೇಶಕಅಶೋಕ ಬೊಮ್ಮಣ್ಣವರ ವರದಿ ಮಂಡಿಸಿದರು. ನಿರ್ದೇಶಕ ಮಲ್ಲಪ್ಪ ಅಷ್ಟಗಿ ಸ್ವಾಗತಿಸಿದರು. ಬಸಯ್ಯಸ್ವಾಮಿ ವಿರಕ್ತಮಠ ಸಂಗೀತ ಸೇವೆ ಮಾಡಿದರು.

ಬಾಬು ಖಂಡೋಜಿ ರೈತ ಗೀತೆ ಹಾಡಿದರು. ಇದೇ ವೇಳೆ ಸರ್ಕಾರದಿಂದ ನಾಮ ನಿರ್ದೇಶಿತ ಸದಸ್ಯ ಮಹಾಂತೇಶ ತುರಮರಿ ಅವರನ್ನು ಸನ್ಮಾನಿಸಲಾಯಿತು. ಸಾವಿರಾರು ರೈತರು ಪಾಲ್ಗೊಂಡಿದ್ದರು.

ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿ: ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ



ರಾಂಪುರ: 'ಮನುಷ್ಯ ಮಾನವೀಯತೆಯಿಂದ ವರ್ತಿಸುವುದೇ ಮಾನವ ಧರ್ಮ' ಎಂದು ಕನೇರಿ ಸಿದ್ಧಗಿರಿ ಸಂಸ್ಥಾನಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ಸಮೀಪದ ಬೆನಕಟ್ಟಿ ಗ್ರಾಮದಲ್ಲಿ ಸ್ಥಳೀಯ ಹನುಮಾನ ಯುವ ಮಿತ್ರ ಮಂಡಳಿ ಗಣೇಶ ಉತ್ಸವದ ಅಂಗವಾಗಿ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿಬುಧವಾರಹಮ್ಮಿಕೊಂಡಿದ್ದ ಧರ್ಮ ಸಭೆಯಲ್ಲಿ ಮಾತನಾಡಿದರು.

ಪ್ರಕೃತಿ, ಪ್ರಾಣಿ, ಪಕ್ಷಿಗಳು, ನದಿಗಳು, ಗಿಡ ಮರಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸಿ ಧರ್ಮ ಪಾಲಿಸುತ್ತಿದ್ದರೆ ಎಲ್ಲ ಸೌಕರ್ಯಗಳ ಮಧ್ಯೆಯೂ ಮನುಷ್ಯ ದಾರಿ ತಪ್ಪಿ ನಡೆಯುತ್ತಿರುವುದು ಬೇಸರದ ಸಂಗತಿ. ಇದಕ್ಕೆಲ್ಲ ಸಂಸ್ಕಾರದ ಅಭಾವ ಕಾರಣ' ಎಂದರು.

ಮುಪ್ಪಾವಸ್ಥೆಯಲ್ಲಿರುವ ಹೆತ್ತ ತಂದೆ, ತಾಯಿಯನ್ನು ಹಂಚಿಕೊಳ್ಳುವ ಕೆಟ್ಟ ಮನೋಭಾವ ಬೆಳೆಸಿಕೊಳ್ಳುತ್ತಿರುವ ಯುವಕರು ತಾವೆಷ್ಟು ಕೆಟ್ಟ ಹಾದಿಯಲ್ಲಿ ಸಾಗುತ್ತಿದ್ದೇವೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದ ಶ್ರೀಗಳು, ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕಲಿಸಬೇಕು. ಅದಕ್ಕೂ ಮೊದಲು ನಾವು ಸಂಸ್ಕಾರವಂತರಾಗಬೇಕು' ಎಂದು ಹೇಳಿದರು.

ಚಿಕ್ಕಾಲಗುಂಡಿಯ ಮಲ್ಲಿಕಾರ್ಜುನ ಮಠದ ಶಿವಶರಣಾನಂದ ಸ್ವಾಮೀಜಿ ಮಾತನಾಡಿ, 'ಪರಸ್ಪರ ಪ್ರೀತಿ, ವಿಶ್ವಾಸ, ಭ್ರಾತೃತ್ವದಿಂದ ಎಲ್ಲರೂ ಒಗ್ಗಟ್ಟಿನಿಂದ ಬಾಳ ಬೇಕು ಎನ್ನುವ ಉದ್ದೇಶದಿಂದ ಗಣೇಶ ಉತ್ಸವ ಆಚರಣೆ ನಡೆಯುತ್ತದೆ. ಇದನ್ನು ತಿಳಿದು ಯುವಕರು ಗಣೇಶ ಹಬ್ಬ ಅರ್ಥಪೂರ್ಣವಾಗಿ ಆಚರಿಸಬೇಕು' ಎಂದರು.

ಅಪ್ಪಣ್ಣಪೂಜಾರ,ಪಂಡಿತಮಾಚಾ ಇದ್ದರು. ಪಾಂಡು ಸಣ್ಣಪ್ಪನವರ ನಿರೂಪಿಸಿದರು. ನಂತರ ಪ್ರಸಾದ ವಿತರಿಸಲಾಯಿತು.

ಶಾಸಕರ ಭಾವಚಿತ್ರಕ್ಕೆ ಹಾನಿ: ಕಾಂಗ್ರೆಸ್ ಕಾರ್ಯಕರ್ತರ ಆಕ್ರೋಶ

ಎಂ.ಕೆ.ಹುಬ್ಬಳ್ಳಿ: ಕ್ಯಾರಕೊಪ್ಪ ಕ್ರಾಸ್ ಮತ್ತು ಕಲಭಾಂವಿ ಕ್ರಾಸ್ ನಿಲ್ದಾಣದಲ್ಲಿ ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ಯೋಜನೆಯಡಿ ತಲಾ 5ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿರುವಬಸ್‌ನಿಲ್ದಾಣದಲ್ಲಿಅಳವಡಿಸಲಾಗಿದ್ದ ಶಾಸಕ ಬಾಬಾಸಾಹೇಬ ಪಾಟೀಲ ಅವರ ಭಾವಚಿತ್ರವನ್ನು ಕಿಡಿಗೇಡಿಗಳು ಹಾನಿಗೊಳಿಸಿದ್ದಾರೆ.

ಬುಧವಾರ ತಡರಾತ್ರಿ ಈ ಘಟನೆ ನಡೆದಿದೆ ಎನ್ನಲಾಗಿದ್ದು, ಗುರುವಾರ ಬೆಳಿಗ್ಗೆ ಕಾಂಗ್ರೆಸ್ ಕಾರ್ಯಕರ್ತರು ಗಮನಿಸಿದಾಗ ಘಟನೆ ಬೆಳಕಿಗೆ ಬಂದಿದೆ.

ಶಾಸಕ ಬಾಬಾಸಾಹೇಬ ಪಾಟೀಲ ಅವರ ಅಭಿವೃದ್ಧಿ ಕಾರ್ಯಗಳನ್ನುಸಹಿಸದಕೆಲವರು ಇಂತಹಕೀಳುಮಟ್ಟದ ಕೆಲಸಕ್ಕಿಳಿದಿದ್ದು, ಈ ಘಟನೆಯನ್ನು ಕಿತ್ತೂರು ಕಾಂಗ್ರೆಸ್ ಬಳಗ ತೀವ್ರವಾಗಿ ಖಂಡಿಸುತ್ತದೆ. ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಪಡಿಸುವುದು, ಸಾರ್ವಜನಿಕ ಆಸ್ತಿಗೆ ಹಾನಿ ಮಾಡುವುದು ಹಾಗೂ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಇಂತಹ ಕೃತ್ಯಗಳ ಮೂಲಕ ವ್ಯಕ್ತಪಡಿಸುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ.

ತಕ್ಷಣವೇ ಈ ಕೃತ್ಯದ ಹಿಂದಿರುವವರನ್ನು ಪತ್ತೆಹಚ್ಚಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ.



20 ವರ್ಷಗಳಿಂದ ಗಬ್ಬು ನಾರುತ್ತಿರುವ ಚರಂಡಿ ಸಮಸ್ಯೆ: ವೈಜ್ಞಾನಿಕ ತಳಹದಿಯಲ್ಲಿ ನಿರ್ಮಿಸಲು ನಿವಾಸಿಗಳ ಆಗ್ರಹ



ರಬಕವಿ : ಇಲ್ಲಿನ ಹೊಸ ಬಸ್ ನಿಲ್ದಾಣದ ಎದುರಿಗಿನ ಬಸವನಗರ ಒಂದನೇ ಕ್ರಾಸ್ನಿಂದ ಹೆಸ್ಕಾಂ ಹಾಗೂ ಪೋಸ್ಟ್ ಆಫೀಸ್ ಕಚೇರಿಗೆ ತೆರಳುವ ಪ್ರಮುಖ ರಸ್ತೆಯುದ್ದಕ್ಕೂ ಇರುವ ಚರಂಡಿಯ ರಚನೆ ಅವೈಜ್ಞಾನಿಕವಾಗಿ ನಿರ್ಮಾಣಗೊಂಡಿದ್ದು, ಕಳೆದ ಇಪ್ಪತ್ತು ವರ್ಷಗಳಿಂದ ಚರಂಡಿಂ-ು ನೀರು ಮುಂದಕ್ಕೆ ಸರಾಗವಾಗಿ ಹರಿಯದೆ, ಗಬ್ಬು ನಾರುತ್ತಿದ್ದು, ಇಲ್ಲಿಯ ನಿವಾಸಿಗಳಿಗೆ ತೀವ್ರ ತೊಂದರೆ ಉಂಟು ಮಾಡುತ್ತಿದೆ. ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ವೈಜ್ಞಾನಿಕ ರೀತಿಯಲ್ಲಿ ಚರಂಡಿ ನಿರ್ಮಿಸಿ ಸಮಸ್ಯೆ ಪರಿಹರಿಸಬೇಕು ಎಂದು ನಿವಾಸಿಗಳ ಪರವಾಗಿ ಸಂ-ಜಯ ಗುಣಕಿ ಆಗ್ರಹಿಸಿದ್ದಾರೆ.

ಈ ರಸ್ತೆಯ ಮೂಲಕ ದಿನಾಲೂ ಡಿಪ್ಲೊಮಾ, ಐಟಿಐ ಕಾಲೇಜು ಸೇರಿದಂತೆ ಹಲವು ಸರ್ಕಾರಿ ಶೈಕ್ಷಣಿಕ ಕೇಂದ್ರಗಳಿಗೆ ವಿದ್ಯಾರ್ಥಿಗಳು ಸಂಚರಿಸುತ್ತಾರೆ. ಅಲ್ಲದೆ ಆಶ್ರಯ ಕಾಲನಿಯ ಸಾವಿರಾರು ಜನರು ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ಆದರೆ ಚರಂಡಿಯಲ್ಲಿ ಸದಾ ಕಸ-ಕೆಸರು ತುಂಬಿಕೊಂಡು ದುರ್ವಾಸನೆ ಬೀರುತ್ತಿದ್ದು, ನೀರು ಸರಾಗವಾಗಿ ಹರಿಯದೆ ರಸ್ತೆಯಲ್ಲೇ ನಿಲ್ಲುತ್ತಿದೆ. ಇದರಿಂದ ವೃದ್ಧರು, ಮಕ್ಕಳು ಹಾಗೂ ವಿದ್ಯಾರ್ಥಿಗಳು ಇಲ್ಲಿಂದ ಸಂಚರಿಸಲು ಪರದಾಡುವಂತಾಗಿದೆ.

ಕಳೆದ ಇಪ್ಪತ್ತು ವರ್ಷಗಳಿಂದ ಸಮಸ್ಯೆ ಹೀಗೆಯೇ ಮುಂದುವರಿದಿದ್ದು, ನಗರಸಭೆಗೆ ಹಲವು ಬಾರಿ ಲಿಖಿತ ಹಾಗೂ ಮೌಖಿಕವಾಗಿ ಮನವಿ ಮಾಡಿದ್ದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಸ್ಥಳೀಯ ಮುಖಂಡರಾದ ಅನೀಲ ಪತ್ತಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಚರಂಡಿನಿರ್ಮಿಸುವಾಗಲೇಇದುಅವೈಜ್ಞಾನಿಕವಾಗಿದೆ ಎಂದು ನಿವಾಸಿಗಳು ಆಕ್ಷೇಪಿಸಿದ್ದರೂ ಕೂಡ ಆಗಿನ ಗುತ್ತಿಗೆದಾರರು ಗುಂಡಿ ತೆಗೆದು ಕಾಮಗಾರಿ ನಡೆಸಿದರು. ಇದೀಗ ಮಳೆ ಸುರಿದಾಗ ಚರಂಡಿ ನೀರು ತುಂಬಿಕೊಂಡು ಸರಾಗವಾಗಿ ಮುಂದೆ ಹರಿಯದೆ ನಿಂತು, ಕೊಳಚೆ ಹಾಗೂ ದುರ್ವಾಸನೆ ಉಂಟಾಗುತ್ತಿದೆ.

ಇದರಿಂದ ಇಲ್ಲಿನ ನಿವಾಸಿಗರಿಗೆ ಡೆಂಗ್ಯೂ, ಟೈಫಾಯಿಡ್, ಚಿಕುನ್ ಗುನ್ಯಾ ಮುಂತಾದ ರೋಗ ತಗುಲಿ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವ ಆತಂಕವಿದೆ ಎಂದು ನಿವಾಸಿಗಳು ಆತಂಕಕ್ಕೆ ಒಳಗಾಗಿದ್ದಾರೆ.

ಅಗ್ನಿ ಸುರಕ್ಷತಾ ನಿಯಮಗಳನ್ನು ತಿಳಿದುಕೊಳ್ಳವುದು ಅವಶ್ಯಕ-ಹಂದಿಗುಂದ

ಅಗ್ನಿ ಅವಘಡ, ತುರ್ತು ಸೇವಾ ಅರಿವು ಹಾಗೂ ಅಣುಕು ಪ್ರದರ್ಶನ

ರಬಕವಿ-ಬನಹಟ್ಟಿ : ಅಗ್ನಿಶಾಮಕ ದಳದ ಸಿಬ್ಬಂದಿ ತಮ್ಮ ಜೀವದ ಹಂಗು ತೊರೆದು ಸಮಾಜದ ರಕ್ಷಣೆಗಾಗಿ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅವರ ಸಮಾಜಮುಖಿ ಕಾರ್ಯಗಳು ಶ್ಲಾಘನೀಯವಾಗಿದ್ದು,ಪ್ರತಿಯೊಬ್ಬರೂಅಗ್ನಿ ಸುರಕ್ಷತಾ ನಿಯಮಗಳನ್ನು ತಿಳಿದುಕೊಂಡು ಅವಘಡಗಳನ್ನು ತಡೆಯಲು ಮುನ್ನೆಚ್ಚರಿಕೆ ವಹಿಸಬೇಕು ಎಂದು ಮಹಾವಿದ್ಯಾಲಯದ ಪ್ರಾಂಶುಪಾಲಡಾ.ಎಸ್.ಆರ್.ಹಂದಿಗುಂದ ಹೇಳಿದರು.

ರಬಕವಿ-ಬನಹಟ್ಟಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಸರಕಾರದ ಕಾಲೇಜು ಶಿಕ್ಷಣ ಇಲಾಖೆ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಅಗ್ನಿಶಾಮಕ ಹಾಗೂ ತುರ್ತು ಸೇವಾ ದಳ, ಎನ್‌ಎಸ್‌ಎಸ್ ಮತ್ತು ರೆಡ್ಕ್ರಾಸ್ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಅಗ್ನಿ ಅವಘಡ ಮತ್ತು ತುರ್ತು ಸೇವಾ ಅರಿವು ಹಾಗೂ ಅಣುಕು ಪ್ರದರ್ಶನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಬಕವಿ-ಬನಹಟ್ಟಿ ಅಗ್ನಿಶಾಮಕ ದಳದ ಪ್ರಧಾನ ಸಿಬ್ಬಂದಿ ರಾಮು ಸನದಿ ಅವರು ಅಗ್ನಿ ಅವಘಡಗಳ ವಿವಿಧ ಕಾರಣಗಳು, ಅವುಗಳನ್ನು ನಿಯಂತ್ರಿಸುವ ವಿಧಾನಗಳು, ಅಗ್ನಿ ಸುರಕ್ಷತಾ ನಿಯಮಗಳು ಹಾಗೂ ತುರ್ತು ಸಂದರ್ಭದಲ್ಲಿ ಸಾರ್ವಜನಿಕರು ವಹಿಸಬೇಕಾದ ಜವಾಬ್ದಾರಿಗಳ ಕುರಿತು ಉಪನ್ಯಾಸ ನೀಡಿದರು.



ನಂತರ ಮಹಾವಿದ್ಯಾಲಯದ ಮೈದಾನದಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ವಿವಿಧ ರೀತಿಯ ಬೆಂಕಿ ಅವಘಡಗಳನ್ನು ನಿಯಂತ್ರಿಸುವ ಪ್ರಾಯೋಗಿಕ ವಿಧಾನಗಳ ಅಣುಕು ಪ್ರದರ್ಶನ ನಡೆಸಿದರು.

ಅಗ್ನಿ ನಂದಿಸುವ ಉಪಕರಣಗಳ ಬಳಕೆ, ಬೆಂಕಿ ಕಾಣಿಸಿಕೊಂಡಾಗ ಕೈಗೊಳ್ಳಬೇಕಾದ ಕ್ರಮಗಳು, ರಕ್ಷಣಾ ಕಾರ್ಯಾಚರಣೆ ಹಾಗೂ ತುರ್ತು ಸಂದರ್ಭದಲ್ಲಿ ಎಚ್ಚರಿಕೆಯಿಂದ ವರ್ತಿಸುವ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡು ಅಗ್ನಿ ಸುರಕ್ಷತೆ ಕುರಿತು ಹಲವು ಮಾಹಿತಿಗಳನ್ನು ಪಡೆದು-ಕೊಂಡರು.

ಅಗ್ನಿ ಅವಘಡಗಳು ಯಾವುದೇ ಸಮಯದಲ್ಲಿ ಸಂಭವಿಸುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕೆ ಮತ್ತು ತುರ್ತು ಪ್ರತಿಕ್ರಿಯೆಯ ಕುರಿತು ಪ್ರತಿಯೊಬ್ಬರೂ ಮೂಲಭೂತ ಜ್ಞಾನ ಹೊಂದಿರಬೇಕು.


ವಿದ್ಯುತ್ ಶಾರ್ಟ್ ಸರ್ಕ್ಯೂಟ್, ಗ್ಯಾಸ್ ಸೋರಿಕೆ, ಅಡುಗೆ ಮನೆಯಲ್ಲಿ ಬೆಂಕಿ ಹಾಗೂ ಇತರ ಕಾರಣಗಳಿಂದ ಬೆಂಕಿ ಕಾಣಿಸಿಕೊಂಡಾಗ ಆತಂಕಕ್ಕೊಳಗಾಗದೆ ತಕ್ಷಣ ಸುರಕ್ಷಿತ ಸ್ಥಳಕ್ಕೆ ತೆರಳಿ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಬೇಕು. ಬೆಂಕಿಯನ್ನು ನಂದಿಸಲು ಸೂಕ್ತ ಉಪಕರಣಗಳನ್ನು ಬಳಸುವವಿಧಾನವನ್ನುತಿಳಿದುಕೊಳ್ಳುವುದು ಅಗತ್ಯವಾಗಿದೆ.

ವಿದ್ಯಾರ್ಥಿಗಳಿಗೆ ನೀಡಿದ ಪ್ರಾಯೋಗಿಕ ತರಬೇತಿ ಭವಿಷ್ಯದಲ್ಲಿ ತುರ್ತು ಸಂದರ್ಭಗಳನ್ನು ಎದುರಿಸಲು ಸಹಕಾರಿಯಾಗಲಿದೆ. ಈ ರೀತಿಯ ಜಾಗೃತಿ ಕಾರ್ಯಕ್ರಮಗಳು ಕಾಲೇಜು ಮಟ್ಟದಲ್ಲಿ ನಿರಂತರವಾಗಿ ನಡೆಯಬೇಕು ಎಂದು ಅಭಿಪ್ರಾಯ ವ್ಯಕ್ತವಾಯಿತು. ಅಗ್ನಿಶಾಮಕ ಸಿಬ್ಬಂದಿಯ ಕಾರ್ಯವೈಖರಿ ಮತ್ತು ರಕ್ಷಣಾ ಕ್ರಮಗಳನ್ನು ವಿದ್ಯಾರ್ಥಿಗಳು ಗಮನಿಸಿದರು. ಕಾರ್ಯಕ್ರಮ ಎಲ್ಲರಿಗೂ ಉಪಯುಕ್ತವಾಯಿತು.

ಕಾರ್ಯಕ್ರಮದಲ್ಲಿಮಹಾವೀರಕವಟಕೊಪ್ಪ, ಮಾರುತಿ ನಡಕಟ್ಟಿನ, ಬಿ. ಎ. ದೇಸಾಯಿ, ಡಾ. ರಮೇಶ ಕುಂಬಾರ, ಪುಂಡಲೀಕ ಬಾಡಗಿ, ವಿಜಯ ಕಾಬ್ರಾ, ಅಶೋಕ ಮುದೇನೂರ, ದಾದಾ ಮಾನಗಾಂವಿ, ವಿಶ್ವಚೇತನ ಪತ್ತಾರ, ಪ್ರಶಾಂತ ಮಾವರಕರ ಹಾಗೂ ಇತರರು ಉಪಸ್ಥಿತರಿದ್ದರು. ಅಶೋಕ ಕನ್ನಾಳ ಸ್ವಾಗತಿಸಿದರು. ಎನ್‌ಎಸ್‌ಎಸ್ ಘಟಕದ ಸಂಯೋಜಕ ಡಾ. ಚೇತನ ಡಾಗಾ ಪ್ರಾಸ್ತಾವಿಕವಾಗಿ ಮಾತನಾಡಿದರು. ರೆಡ್ಕ್ರಾಸ್ ಘಟಕದ ಸಂಯೋಜಕ ಮಹಾಂತೇಶ ರಡ್ಡೆರಟ್ಟಿಉಪಸ್ಥಿತರಿದ್ದರು. ಡಾ. ಮಹಾದೇವ ಪೋತರಾಜ ಕಾರ್ಯಕ್ರಮ ಸೊಗಸಾಗಿ ನಿರೂಪಿಸಿದರು.

ತೇರದಾಳದಲ್ಲಿ ಬಿಜೆಪಿಯಿಂದ ಅಂಗಳದ ಉತ್ಸವ

ಸಾರ್ವಜನಿಕರ ಸೇವೆ ಮಾಡುವವರನ್ನು ಗೌರವಿಸಿ-ಸವದಿ



ತೇರದಾಳ : ಸಾರ್ವಜನಿಕ ವಲಯದಲ್ಲಿ ಸೇವೆ ಮಾಡುವ ಪ್ರತಿಯೊಬ್ಬರನ್ನೂ ಗೌರವಿಸುವ ಕೆಲಸ ಎಲ್ಲರೂ ಮಾಡಬೇಕೆಂದು ಶಾಸಕ ಸಿದ್ದು ಸವದಿ ತಮ್ಮ ಅಭಿಮತ ವ್ಯಕ್ತಪಡಿಸಿದರು.

ಬಿಜೆಪಿ ಪಕ್ಷದ ವತಿಯಿಂದ 'ಸೇವಾ ಸಂಕಲ್ಪ ಅಭಿಯಾನ' ನಿಮಿತ್ತ ತೇರದಾಳದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಂಗಳದ ಉತ್ಸವ ಕಾರ್ಯಕ್ರಮದಲ್ಲಿ ಅಂಗನವಾಡಿ, ಆಶಾ ಕಾರ್ಯಕರ್ತೆಯರನ್ನು, ಅಂಗನವಾಡಿಯ ಪುಟಾಣಿಗಳ ತಾಯಂದಿರನ್ನು ಸತ್ಕರಿಸಿ ಅವರು ಮಾತನಾಡಿದರು.

ಸಾರ್ವಜನಿಕ ವಲಯದಲ್ಲಿ ಕೆಲಸ ಮಾಡುವಾಗ ಸಾಕಷ್ಟು ಆರೋಪ ಪ್ರತ್ಯಾರೋಪ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವುಗಳನ್ನು ಮೆಟ್ಟಿನಿಂತು ಕೆಲಸ ಮಾಡುವುದು ಒಂದು ದೊಡ್ಡ ಸವಾಲು ಆಗಿರುತ್ತದೆ. ಆದ್ದರಿಂದ ಸಾರ್ವಜನಿಕ ಸೇವೆ ಮಾಡುವವರನ್ನು ಗೌರವಿಸುವ ಕೆಲಸವನ್ನು ನಾವೆಲ್ಲರೂ ಮಾಡಬೇಕೆಂದು ಹೇಳಿದರು. ಪಕ್ಷದ ಗ್ರಾಮೀಣ ಮಂಡಳ ಅಧ್ಯಕ್ಷ ಸುರೇಶ ಅಕ್ಕಿವಾಟ ಸೇವಾ ಸಂಕಲ್ಪ ಅಭಿಯಾನ ಕಾರ್ಯಕ್ರಮ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರವೀಣ ನಾಡಗೌಡ, ನಗರ ಘಟಕ ಅಧ್ಯಕ್ಷ ರಾಮಣ್ಣ ಹಿಡಕಲ್, ಸುರೇಶ ರೇಣಕೆ, ಸಚಿನ ಕೊಡತೆ, ಸಂತೋಷ ಜಮಖಂಡಿ, ಸುಭಾಸ ಗಾತಾಡೆ, ಭೀಮಗೊಂಡ ಸದಲಗಿ, ಸಂತೋಷ ಅಕ್ಕೆನ್ನವರ, ಆನಂದ ಮಧುಮಲಿ, ಭೀಮಶಿ ಹಿರೇಕುರುಬರ, ರಮೇಶ ಪಟ್ಟಣಶೆಟ್ಟಿ, ವಿಠ್ಠಲ ಹಾಡಕರ, ಆಕಾಶ ತೇಲಿ, ಬ್ರಹ್ಮಾನಂದ ಬ್ಯಾಳಿ, ಶಶಿಕಾಂತ ಹಜಾರೆ ಮತ್ತಿತರರು ಉಪಸ್ಥಿತರಿದ್ದರು.

ಮುಳುಗಡೆ ಸಂತ್ರಸ್ತರಿಗೆ 153 ಇ-ಖಾತಾ ಉತಾರೆ ವಿತರಣೆ

ಸಂತ್ರಸ್ತರಿಗೆ ತೊಂದರೆಯಾಗದಂತೆ ದಾಖಲೆ ವಿತರಣೆ: ಪ್ರಕಾಶ ತಪಶೆಟ್ಟಿ



ಬಾಗಲಕೋಟೆ : ಮುಳುಗಡೆ ಸಂತ್ರಸ್ತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ದಾಖಲೆಗಳನ್ನು ಒದಗಿಸಲಾಗುತ್ತಿದೆ ಎಂದು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಹೇಳಿದರು.

ಬಿಟಿಡಿಎ ಆವರಣದಲ್ಲಿಂದು ಯುನಿಟ್-1ಮತ್ತು ಯುನಿಟ್-2ರ ಮುಳುಗಡೆ ಸಂತ್ರಸ್ಥರಿಗೆ ಇ-ಖಾತಾಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು ಸದ್ಯ 153 ಇ-ಖಾತಾಗಳ ಉತಾರೆಗಳನ್ನು ವಿತರಣೆ ಮಾಡಲಾಗಿದ್ದು, ಮುಂದಿನ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಉತಾರೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಇ-ಖಾತಾ ಉತಾರೆಗಳು ದೊರೆತ ಹಿನ್ನೆಲೆಯಲ್ಲಿ ಸಂತ್ರಸ್ತರು ಸಂತಸ ವ್ಯಕ್ತಪಡಿಸಿ, ಪ್ರಾಧಿಕಾರದ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಅಜಯಕುಮಾರ ಸರನಾಯಕ, ಪ್ರಾಧಿಕಾರದ ಮುಖ್ಯ ಇಂಜಿನಿಯರ್ ಚಂದ್ರಹಾಸ ಬಂಡಿ, ಅಧೀಕ್ಷಕ ಅಭಿಯಂತರ ಎಸ್.ಎಸ್. ಕರಗಾರ, ಕಾರ್ಯನಿರ್ವಾಹಕ ಅಭಿಯಂತರರು, ವಿಭಾಗ-2, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಪ್ರಭಾರ ಪುನರ್ವಸತಿ ಅಧಿಕಾರಿ ವೈ.ಬಿ.ಪಾತ್ರೋಟಿ, ಅಧ್ಯಕ್ಷರ ಆಪ್ತ ಸಹಾಯಕರು ಹಾಗೂ ಪ್ರಾಧಿಕಾರದ ಸಿಬ್ಬಂದಿ ಉಪಸ್ಥಿತರಿದ್ದರು.

Printed by Published by ASHWARYA PALLATE on behalf of ASHWARYA PALLATE, Printed at DHARIDEEPA PRINTERS & PUBLISHERS, NO. 74, 4TH MAIN, 7TH CROSS NEAR CHOWDESHWARI TEMPLE, KAVERINAGAR, MAHADEVAPURA, BENGALURU, KARNATAKA - 560048. and Published at BASAVESHWAR CIRCLE, 4TH CROSS, NEKAR NAGAR, HUBLI, OLD HUBLI, DHARWAD, KARNATAKA - 580024. Editor ASHWARYA PALLATE